ಕರ್ನಾಟಕ ಸ್ಕೌಟ್ ಮತ್ತು ಗೈಡ್
ತಿಂಗಳ ವಾರ್ತಾಪತ್ರಿಕೆ
Karnataka Scout & Guide
Monthly News Magazine
Vol -20 | Issue-01 | January 2023 | ₹ 10/-

**ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗಳಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರ ಏರ್ಪಡಿಸಿದ 74ನೇ ಗಣರಾಜ್ಯೋತ್ಸವ ಸಮಾರಂಭದ ಪಥಸಂಚಲನದಲ್ಲಿ ಪಾಲ್ಗೊಳ್ಳುವ ಮೂಲಕ ಸಂಭ್ರಮದಿಂದ ಆಚರಿಸಲಾಯಿತು. ಕೆಲವು ಜಿಲ್ಲೆಗಳ ಭಾವಚಿತ್ರಗಳು.**



## ಕೊಡಗು ಜಿಲ್ಲೆ

ಪ್ರಥಮ ಸ್ಥಾನ ಪಡೆದ ಮಡಿಕೇರಿ ಸಂತ ಮೈಕಲರ ಪ್ರೌಢಶಾಲೆಯ ಗೈಡ್ಸ್ ತಂಡಕ್ಕೆ ಮಾನ್ಯ ಶಾಲಾ ಶಿಕ್ಷಣ, ಸಾಕ್ಷರತೆ ಮತ್ತು ಸಕಾಲ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಬಿ.ಸಿ. ನಾಗೇಶ್‌ರವರು ಪ್ರಶಸ್ತಿ ನೀಡಿ ಗೌರವಿಸಿದರು. ಜಿಲ್ಲಾಧಿಕಾರಿಗಳಾದ ಡಾ. ಬಿ.ಸಿ. ಸತೀಶ್, ಮುಖ್ಯ ಕಾರ್ಯನಿರ್ವಹಣ ಅಧಿಕಾರಿಗಳಾದ ಶ್ರೀ ಆಕಾಶ್, ನಗರಸಭಾ ಅಧ್ಯಕ್ಷರಾದ ಶ್ರೀಮತಿ ಅನಿತಾ ಪೂವಯ್ಯ, ಸಾ.ಶಿ. ಇಲಾಖೆಯ ಉಪನಿರ್ದೇಶಕರಾದ ಶ್ರೀ ಸಿ. ರಂಗದಾಮಯ್ಯ, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ ಚಿತ್ರದಲ್ಲಿದ್ದಾರೆ.

## ತುಮಕೂರು ಜಿಲ್ಲೆ

ಪ್ರಥಮ ಸ್ಥಾನ ಪಡೆದ ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗೇಶ್ವರ ಸ್ಕೌಟ್ ಟ್ರೂಪ್ ತಂಡ ಮತ್ತು ದ್ವಿತೀಯ ಸ್ಥಾನ ಪಡೆದ ತುಮಕೂರು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ರೇಂಜರ್ಸ್ ತಂಡಗಳಿಗೆ ಮಾನ್ಯ ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಅರಗ ಜ್ಞಾನೇಂದ್ರರವರು ಪ್ರಶಸ್ತಿ ನೀಡಿ ಗೌರವಿಸಿದರು. ಜಿಲ್ಲಾಧಿಕಾರಿಗಳಾದ ಶ್ರೀ ವೈ.ಎಸ್. ಪಾಟೀಲ್, ಮಹಾಪೌರರಾದ ಶ್ರೀಮತಿ ಪ್ರಭಾವತಿ ಸುಧೀಶ್ವರ್ ಚಿತ್ರದಲ್ಲಿದ್ದಾರೆ.



**ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗಳಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರ ಏರ್ಪಡಿಸಿದ 74ನೇ ಗಣರಾಜ್ಯೋತ್ಸವ ಸಮಾರಂಭದ ಪಥಸಂಚಲನದಲ್ಲಿ ಪಾಲ್ಗೊಳ್ಳುವ ಮೂಲಕ ಸಂಭ್ರಮದಿಂದ ಆಚರಿಸಲಾಯಿತು. ಕೆಲವು ಜಿಲ್ಲೆಗಳ ಭಾವಚಿತ್ರಗಳು.**



**ಯಾದಗಿರಿ ಜಿಲ್ಲೆ**

ಪ್ರಥಮ ಸ್ಥಾನ ಪಡೆದ ಯಾದಗಿರಿ ಮಹಾತ್ಮಗಾಂಧಿ ಶಾಲೆಯ ಸ್ಕೌಟ್ಸ್ ತಂಡಕ್ಕೆ ಮಾನ್ಯ ಪಶುಸಂಗೋಪನ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಪ್ರಭು ಚಾವ್ಹಾಣ ಅವರು ಪ್ರಶಸ್ತಿ ನೀಡಿ ಗೌರವಿಸಿದರು.



**ಕಾರವಾರ ಜಿಲ್ಲೆ**

ದ್ವಿತೀಯ ಸ್ಥಾನ ಪಡೆದ ಕಾರವಾರ ಸೆಂಟ್ ಜೋಸೆಫ್ ಶಾಲೆಯ ಸ್ಕೌಟ್ ತಂಡಕ್ಕೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಕೋಟ ಶ್ರೀನಿವಾಸ್ ಪೂಜಾರಿ ಅವರು ಪ್ರಶಸ್ತಿ ನೀಡಿ ಗೌರವಿಸಿದರು.



**ಕೊಪ್ಪಳ ಜಿಲ್ಲೆ**

ಉತ್ತಮ ಪ್ರದರ್ಶನ ನೀಡಿದ ಸ್ಕೌಟ್ಸ್–ಗೈಡ್ಸ್‌ಗಳಿಗೆ ಮಾನ್ಯ ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಆನಂದಸಿಂಗ್ ಮತ್ತು ಮಾನ್ಯ ಶಾಸಕರಾದ ಶ್ರೀ ರಾಘವೇಂದ್ರ ಹಿಟ್ನಾಳ ಅವರುಗಳು ಪ್ರಶಸ್ತಿಪತ್ರ ಹಾಗೂ ಬಹುಮಾನವನ್ನು ನೀಡಿದರು. ಜಿಲ್ಲಾಧಿಕಾರಿಗಳಾದ ಶ್ರೀ ಸುಂದರೇಶ್ ಬಾಬು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಅರುಣಾಂಗುಸು, ಸಿ.ಇ.ಓ. ಶ್ರೀಮತಿ ಬಿ. ಫೌಜಿಯಾತ, ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಸಾವಿತ್ರಿ ಕಡಿ ಇತರರು ಚಿತ್ರದಲ್ಲಿದ್ದಾರೆ.

**ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗಳಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರ ಏರ್ಪಡಿಸಿದ 74ನೇ ಗಣರಾಜ್ಯೋತ್ಸವ ಸಮಾರಂಭದ ಪಥಸಂಚಲನದಲ್ಲಿ ಪಾಲ್ಗೊಳ್ಳುವ ಮೂಲಕ ಸಂಭ್ರಮದಿಂದ ಆಚರಿಸಲಾಯಿತು. ಕೆಲವು ಜಿಲ್ಲೆಗಳ ಭಾವಚಿತ್ರಗಳು.**



**ರಾಯಚೂರು ಜಿಲ್ಲೆ**

ಪ್ರಥಮ ಸ್ಥಾನ ಪಡೆದ ಜಹಿರಾಬಾದ್ ಸರ್ಕಾರಿ ಪ್ರೌಢಶಾಲೆಯ ಗೈಡ್ಸ್ ತಂಡಕ್ಕೆ ಮಾನ್ಯ ಕೈಮಗ್ಗ, ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶಂಕರ ಬ. ಪಾಟೀಲ್ ಮುನೇನಕೊಪ್ಪ ಅವರು ಪ್ರಶಸ್ತಿ ನೀಡಿ ಗೌರವಿಸಿದರು. ಜಿಲ್ಲೆಯ ಅಧಿಕಾರಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಪದಾಧಿಕಾರಿಗಳು ಚಿತ್ರದಲ್ಲಿದ್ದಾರೆ.



**ಚಿಕ್ಕಮಗಳೂರು ಜಿಲ್ಲೆ**

ದ್ವಿತೀಯ ಸ್ಥಾನ ಪಡೆದ ಶ್ರೀ ವಾಸವಿ ಶಾಲೆಯ ಸ್ಕೌಟ್ಸ್ ತಂಡಕ್ಕೆ ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರು ಪ್ರಶಸ್ತಿ ನೀಡಿ ಗೌರವಿಸಿದರು. ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ಎಲ್. ಬೋಜೇಗೌಡ, ಜಿಲ್ಲಾಧಿಕಾರಿಗಳಾದ ಶ್ರೀ ಕೆ.ಎನ್. ರಮೇಶ್, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಜಿ. ಪ್ರಭು, ನಗರಸಭಾ ಅಧ್ಯಕ್ಷರಾದ ಶ್ರೀ ವರಸಿದ್ದಿ ವೇಣುಗೋಪಾಲ್ ಹಾಗೂ ಇತರರು ಚಿತ್ರದಲ್ಲಿದ್ದಾರೆ.



**ಹಾಸನ ಜಿಲ್ಲೆ**

ಪ್ರಥಮ ಸ್ಥಾನ ಪಡೆದ ಶ್ರೀ ಬಸವರಾಜೇಂದ್ರ ಪ್ರೌಢಶಾಲೆಯ ಸ್ಕೌಟ್ ತಂಡಕ್ಕೆ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಎಂ.ಎಸ್. ಅರ್ಚನ, ಮಾನ್ಯ ಶಾಸಕರಾದ ಶ್ರೀ ಪ್ರೀತಮ್‌ಗೌಡ ರವರು ಪ್ರಶಸ್ತಿ ನೀಡಿ ಗೌರವಿಸಿದರು. ಜಿಲ್ಲಾ ಪಂಚಾಯ್ತಿ ಕಾರ್ಯ ನಿರ್ವಾಣಾಧಿಕಾರಿಗಳಾದ ಶ್ರೀ ಕಾಂತರಾಜು

# ಹೃತ್ಪೂರ್ವಕ ಅಭಿನಂದನೆಗಳು



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೊಡಗು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾಗಿರುವ ಜಾನಪದ ಕಲಾವಿದೆ **ಶ್ರೀಮತಿ ರಾಣಿ ಮಾಚಯ್ಯ ರವರಿಗೆ** ಭಾರತ ಸರ್ಕಾರದ ಪ್ರತಿಷ್ಠಿತ **"ಪದ್ಮಶ್ರೀ"** ಪ್ರಶಸ್ತಿಗೆ ಪುರಸ್ಕೃತರಾಗಿದ್ದಾರೆ.

ಇವರು ಕೊಡಗು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾಗಿ ಜಿಲ್ಲೆಯ ಅನೇಕ ಸ್ಕೌಟ್–ಗೈಡ್ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸದಸ್ಯರೊಬ್ಬರಿಗೆ ಮೊದಲಬಾರಿಗೆ ಭಾರತ ಸರ್ಕಾರ ನೀಡುವ "ಪದ್ಮಶ್ರೀ" ಪ್ರಶಸ್ತಿಗೆ ಭಾಜನರಾಗಿರುವು ಹೆಮ್ಮೆಯ ವಿಷಯವಾಗಿದೆ.

ಇವರು ತಮ್ಮ ಬಾಲ್ಯದಿಂದಲೂ ಕೊಡವ ಜಾನಪದ ಕಲಾ ಪ್ರಕಾರಗಳಾದ ಕೋಲಾಟ, ಉಮ್ಮತಾಟ್, ಭಾರತನಾಟ್ಯ, ಬುಡಕಟ್ಟು ಜನಾಂಗದ ನೃತ್ಯ, ಕನ್ನಡ ನಾಡು ನುಡಿ ಬಿಂಬಿಸುವ ನೃತ್ಯ ಶೈಲಿಗಳನ್ನು ವೇದಿಕೆಗಳಲ್ಲಿ ಪ್ರದರ್ಶನ ಮಾಡುವುದರೊಂದಿಗೆ ಕೊಡಗು ಜಿಲ್ಲೆಯಲ್ಲಿ "ಕಾವೇರಿ ಕಲಾವೃಂದ" ಎಂಬ ತಂಡ ಕಟ್ಟಿ ದೇಶದ ವಿವಿದೆಡೆಗಳಲ್ಲಿ ಕಲಾವೈವಿದ್ಯ ಅನಾವರಣ ಮಾಡಿದ್ದಾರೆ. ಅಲ್ಲದೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯಲ್ಲಿ ಎರಡು ಬಾರಿ ನಿರ್ದೇಶಕರಾಗಿ ಹಾಗೂ ಒಂದು ಬಾರಿ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದಾರೆ.

ಶ್ರೀಮತಿ ರಾಣಿ ಮಾಚಯ್ಯನವರಿಗೆ ರಾಜ್ಯ ಸಂಸ್ಥೆಯಿಂದ ಹೃತ್ಪೂರ್ವಕ ಅಭಿನಂದನೆಗಳು.

– ರಾಜ್ಯ ಕಾರ್ಯದರ್ಶಿ

# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 20 Issue : 01 January 2023


## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...06

ಗಣರಾಜ್ಯ ದಿನಾಚರಣೆ ...07

ರಾಜ್ಯ ಕೇಂದ್ರ ಕಛೇರಿಯಲ್ಲಿ 74ನೇ ಗಣರಾಜ್ಯೋತ್ಸವ ...08

ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಆಯುಕ್ತರು (ಸ್ಕೌಟ್ಸ್-ಗೈಡ್ಸ್) ಜಿಲ್ಲಾ ಕಾರ್ಯದರ್ಶಿಗಳು ಮತ್ತು ಜಿಲ್ಲಾ ಕೋಶಾಧಿಕಾರಿಗಳ ಸಭೆ ...09

ಸಂಕ್ರಾಂತಿ ಹಬ್ಬ ...10

ಸುದ್ದಿ ತಂದ ಪತ್ರಿಕಾ ಮಾಧ್ಯಮ ...15

ಜಿಲ್ಲೆವಾರ್ತೆಗಳು ...18

ಶ್ರದ್ಧಾಂಜಲಿ ...26



**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್





ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.



080-2226 0017, 2226 7470 www.bsgkarnataka.org The Bharat Scouts & Guides-Karnataka



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಬಂಧುಗಳಿಗೆ,**

ಕಳೆದ ತಿಂಗಳು ಮೂಡಬಿದಿರೆಯಲ್ಲಿ ನಡೆದ ಅಂತಾರಾಷ್ಟ್ರೀಯ ಸ್ಕೌಟ್ಸ್-ಗೈಡ್ಸ್ ಸಾಂಸ್ಕೃತಿಕ ಜಾಂಬೋರಿಯ ಯಶಸ್ಸಿಗೆ ಕಾರಣರಾದ ಕೆಲವರನ್ನು ಖುದ್ದು ಭೇಟಿ ಮಾಡಿ ಹಾಗೂ ಪತ್ರ ಬರೆಯುವ ಮೂಲಕ ಕೃತಜ್ಞತೆಗಳನ್ನು ತಿಳಿಸುವ ಪ್ರಯತ್ನದಲ್ಲಿದ್ದೇನೆ. ಎಲ್ಲರಿಂದಲೂ ಸಕಾರಾತ್ಮಕ ಸ್ಪಂದನೆಸಿಗುತ್ತಿದೆ. ಅಧಿಕಾರಿಗಳು ಮತ್ತು ವಿವಿಧ ಗಣ್ಯರುಗಳು ಪ್ರಶಂಸೆ ವ್ಯಕ್ತಪಡಿಸುತ್ತಿದ್ದಾರೆ. ಕೆಲವು ಭಿನ್ನವಾದ ಅಭಿಪ್ರಾಯಗಳೂ ಇರಬಹುದು, ಅವುಗಳನ್ನು ಸಮಚಿತ್ತದಿಂದ ಸ್ವೀಕರಿಸಿ, ಎಲ್ಲರ ಭಾವನೆಗಳನ್ನು ಗೌರವಿಸುತ್ತೇನೆ.

ರಾಜ್ಯಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಸಮಯ ಕೇಳಲು ಗೌರವಾನ್ವಿತ ರಾಜ್ಯ ಪಾಲರನ್ನು ಭೇಟಿಮಾಡಿದ್ದೆವು. ಜಾಂಬೋರಿಯ ಬಗ್ಗೆ ಅಪಾರವಾದ ಮೆಚ್ಚುಗೆ ಸೂಚಿಸಿರುವ ಅವರು ಫೆಬ್ರವರಿ 9 ರಂದು ಈ ಸಮಾರಂಭಕ್ಕೆ ಸಮಯ ಕೊಟ್ಟಿದ್ದಾರೆ. ಇದರೊಂದಿಗೆ ಫೆಬ್ರವರಿ 8 ರಂದು ರಾಜ್ಯಮಟ್ಟದ ಗೀತಗಾಯನ ಸ್ಪರ್ಧೆಯನ್ನು ಕೇಂದ್ರ ಕಚೇರಿಯ ಕೊಂಡಜ್ಜಿ ಬಸಪ್ಪಭವನದಲ್ಲಿ ಆಯೋಜಿಸಲಾಗಿದೆ. ಈ ಎರಡು ಕಾರ್ಯಕ್ರಮಗಳ ಸಿದ್ದತೆಯಲ್ಲಿ ನಾವು ತೊಡಗಿದ್ದೇವೆ. ರಾಜ್ಯಪುರಸ್ಕಾರ ಸಮಾರಂಭ ನಮ್ಮ ಸಂಸ್ಥೆಯ ಮಹತ್ವಾಕಾಂಕ್ಷಿ ಸಮಾರಂಭದಲ್ಲೊಂದು ಎಂಬುದು ಸರ್ವವಿದಿತ. ಇದಕ್ಕೆ ಅರ್ಹ ಸ್ಕೌಟ್ಸ್-ಗೈಡ್ಸ್‌ಗಳನ್ನು ಸಿದ್ಧಗೊಳಿಸುವ ನಿಟ್ಟಿನಲ್ಲಿ ನಮ್ಮ ಎಲ್ಲಾ ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಸಿಬ್ಬಂದಿಗಳು ಆಸಕ್ತಿವಹಿಸಬೇಕು. ಈ ಎರಡೂ ಕಾಯಕ್ರಮಗಳಿಗೆ ಪೋಷಕರನ್ನೂ ಸಹ ಆತ್ಮೀಯವಾಗಿ ಸ್ವಾಗತಿಸುತ್ತೇನೆ.

ಈ ತಿಂಗಳ 12ರಂದು ಸ್ವಾಮಿ ವಿವೇಕಾನಂದರ ಜಯಂತಿಯನ್ನು ನಾವೆಲ್ಲರೂ ರಾಷ್ಟ್ರೀಯ ಯುವದಿನವನ್ನಾಗಿ ಆಚರಿಸಿದ್ದೇವೆ. ಯುವಶಕ್ತಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಇದು ಬಹುಮುಖ್ಯವಾದ ದಿನ.

ದೇಶಕ್ಕೆ 74ನೇ ಗಣರಾಜ್ಯೋತ್ಸವದ ಸಂಭ್ರಮ. ಡಾ. ಬಿ.ಆರ್. ಅಂಬೇಡ್ಕರ್‌ರವರ ನೇತೃತ್ವದ ಸಂವಿಧಾನ ರಚನಾ ಸಮಿತಿ, ಸರಿಸುಮಾರು 4 ವರ್ಷಗಳ ಪರಿಶ್ರಮದ ಫಲವಾಗಿ 1950ರ ಜನವರಿ 26ರಂದು ನಮ್ಮ ಸಂವಿಧಾನ ಜಾರಿಗೆಬಂತು. ಇದು ಭಾರತದ ಬಹುದೊಡ್ಡ ಲಿಖಿತ ಸಂವಿಧಾನ. ಸಂವಿಧಾನದ ಮೂಲಭೂತ ಹಕ್ಕುಗಳಂತೆಯೇ, ಈ ದೇಶದ ಪ್ರಜೆಗಳಾಗಿ ನಾವು ನಮ್ಮ ಮೂಲಭೂತ ಕರ್ತವ್ಯಗಳನ್ನುಸಹ ಸಮರ್ಪಕವಾಗಿ ನಿರ್ವಹಿಸೋಣ. ಗಣರಾಜ್ಯೋತ್ಸವನ್ನು ರಾಜ್ಯಾದ್ಯಂತ ನಮ್ಮ ಸ್ಥಳೀಯ ಸಂಸ್ಥೆಗಳಲ್ಲಿ ವೈವಿಧ್ಯಮಯವಾದ ರೀತಿಯಲ್ಲಿ ಆಚರಿಸಿರುವುದು, ಕೆಲವು ಜಿಲ್ಲೆಗಳಲ್ಲಿನ ಸರ್ಕಾರಿ ಕಾರ್ಯಕ್ರಮಗಲ್ಲಿ ಸ್ಕೌಟ್ಸ್-ಗೈಡ್ಸ್‌ಗಳು ಭಾಗವಹಿಸಿರುವುದು ಸಂತೋಷವಾಗಿದೆ. ಎಲ್ಲರಿಗೂ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ಈ ಮೊದಲೇ ನಿಗದಿಯಾಗಿದ್ದಂತೆ, ಜನವರಿ 26 ರಂದು ನಾವೆಲ್ಲರೂ ಮೂಡಬಿದ್ರಿಯಲ್ಲಿಯೇ ಇದ್ದಕಾರಣ, ಆಳ್ವಾಸ್ ಶಿಕ್ಷಣ ಸಂಸ್ಥೆಯವರು ಆಯೋಜಿಸಿದ್ದ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ನಾವೆಲ್ಲರೂ ಭಾಗವಹಿಸಿದ್ದೆವು. ನಿಟ್ಟೆಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ವಿನಯ್‌ಹೆಗ್ಡೆರವರಿಂದ ಧ್ವಜಾರೋಹಣಗೊಂಡ ಸಮಾರಂಭ ಸುಂದರವಾಗಿತ್ತು. ರಾಜ್ಯಸಂಸ್ಥೆಯಲ್ಲಿ ನಮ್ಮ ಚಳುವಳಿಯ ಮುಖಂಡರಾದ ಶ್ರೀ ಕೊಂಡಜ್ಜಿ ಷಣ್ಮುಖಪ್ಪರವರ ಅಧ್ಯಕ್ಷತೆಯಲ್ಲಿ, ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿರುವ ಡಾ. ಗೊ.ರು. ಚನ್ನಬಸಪ್ಪರವರಿಂದ ಧ್ವಜಾರೋಹಣಗೊಂಡು ನಡೆದ ಸಮಾರಂಭವೂ ಯಶಸ್ವಿಯಾಗಿದೆ. ಎಲ್ಲರಿಗೂ ಧನ್ಯವಾದಗಳು.

ವಿಶ್ವಸಾಂಸ್ಕೃತಿಕ ಜಂಬೊರಿಯ ಯಶಸ್ಸಿಗೆ ಕಾರಣರಾದ ಪ್ರಮುಖರಲ್ಲಿ ಒಬ್ಬರಾಗಿರುವ ಡಾ. ಮೋಹನ್ ಆಳ್ವರವರ ಆತಿಥ್ಯದಲ್ಲಿ, ಈ ಯಶಸ್ಸಿನ ಸಂಭ್ರಮವನ್ನು ಹಂಚಿಕೊಳ್ಳುವುದರ ಜೊತೆಗೆ ವೈಫಲ್ಯಗಳ ಬಗ್ಗೆ ಚರ್ಚಿಸಲು, ಚಳುವಳಿಯ ಬೆಳವಣಿಗೆ ಬಗ್ಗೆ ಸಮಾಲೋಚಿಸಲು ಜನವರಿ 25ರಂದು ರಾಜ್ಯ ಹಾಗೂ ಜಿಲ್ಲಾ ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಮುಖಂಡರುಗಳ ಸಭೆಯನ್ನು ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ಕರಯಲಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 75 ಜನರು ಭಾಗವಹಿಸಿ, ಸಲಹೆ ಸೂಚನೆಗಳನ್ನು ಕೊಡುವ ಮೂಲಕ ಸಭೆಯನ್ನು ಯಶಸ್ವಿಗೊಳಿಸಿದ್ದಾರೆ. ಸಭೆಯನ್ನು ಆಯೋಜಿಸಿದ ಡಾ. ಮೋಹನ್ ಆಳ್ವರವರಿಗೆ ಮತ್ತು ಭಾಗವಹಿಸಿದವರೆಲ್ಲರಿಗೆ ಅಭಿನಂದನೆಗಳು.

ಜನವರಿ 30 ಹುತಾತ್ಮರ ದಿನಾಚರಣೆ. ದೇಶಕ್ಕಾಗಿ ತ್ಯಾಗ ಬಲಿದಾನಗಳನ್ನು ಮಾಡಿದ ಮಹನೀಯರನ್ನು ನೆನಪು ಮಾಡಿಕೊಳ್ಳಬೇಕಾದ ಹಾಗೂ ಅದರ ಮಹತ್ವವನ್ನು ತಿಳಿದು ಕೊಳ್ಳಬೇಕಾದ ದಿನ. ನಮ್ಮ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಸರ್ವಧರ್ಮ ಪ್ರಾರ್ಥನೆ ಮತ್ತು ಭಾವೈಕ್ಯತೆಯನ್ನು ಮೂಡಿಸುವಂಥ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಆ ದಿನವನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂಬ ಆಶಯ ನನ್ನದು.

ಈಗಾಗಲೇ ಎಸ್.ಎಸ್.ಎಲ್.ಸಿ ಪರೀಕ್ಷೆಗಳ ವೇಳಾಪಟ್ಟಿ ಪ್ರಕಟವಾಗಿದೆ. ಎಲ್ಲ ಶಾಲಾ ಕಾಲೇಜುಗಳಲ್ಲಿ ಪೂರ್ವಸಿದ್ದತಾ ಪರೀಕ್ಷೆಗಳು ನಡೆಯುತ್ತಿವೆ. ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಪೂರಕ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿದೆ. ಎಲ್ಲ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರುಗಳಿಗೆ ನಮ್ಮ ಸಂಸ್ಥೆ ಶುಭಹಾರೈಸುತ್ತದೆ.

ಕೇಂದ್ರ ಸರ್ಕಾರದಿಂದ ಕೊಡಲಾಗುವ ಈ ಸಾಲಿನ ಅತ್ಯುತ್ತಮ ನಾಗರಿಕ ಸೇವಾ ಪ್ರಶಸ್ತಿಗಳಾದ 'ಪದ್ಮ' ಪ್ರಶಸ್ತಿಗಳಿಗೆ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಂ. ಕೃಷ್ಣ, ಕಾದಂಬರಿಕಾರದಾದ ಡಾ. ಎಸ್. ಎಲ್. ಭೈರಪ್ಪ, ಶ್ರೀಮತಿ ಸುಧಾಮೂರ್ತಿ ಅವರನ್ನೊಳಗೊಂಡಂತೆ 8 ಮಹನೀಯರುಗಳು ಭಾಜನರಾಗಿದ್ದಾರೆ. ಅವರೆಲ್ಲರಿಗೆ ನಮ್ಮ ರಾಜ್ಯ ಸಂಸ್ಥೆಯಿಂದ ಹೃತ್ಪೂರ್ವಕವಾದ ಅಭಿನಂದನೆಗಳು.

ಫೆಬ್ರವರಿ 18 ಮಹಾಶಿವರಾತ್ರಿ, ಹಿಂದೂಧರ್ಮದಲ್ಲಿ ಶಿವನ ಆರಾಧನೆಗೆ ಬಹಳ ಮಹತ್ವವಿದೆ. ಎಲ್ಲರಿಗೂ ಮಹಾಶಿವರಾತ್ರಿಯ ಶುಭಾಶಯಗಳನ್ನು ತಿಳಿಸುತ್ತಾ, ಎಲ್ಲಾ ಕಷ್ಟಗಳು ದೂರವಾಗಿ, ಸುಖ ಸಂತೋಷ ಹಾಗೂ ಸಮೃದ್ಧಿ ಲಭಿಸಲಿ ಎಂದು ಹಾರೈಸುತ್ತೇನೆ. ಎಲ್ಲರಿಗೂ ಶುಭವಾಗಲಿ.

ಸ್ಕೌಟ್ ಮತ್ತು ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ



(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

"ತಿನ್ನುವ ಆಹಾರವನ್ನು ವ್ಯರ್ಥಮಾಡದಿರೋಣ, ಏಕೆಂದರೆ
ನಾವು ಬಿಸಾಡುವ ಅನ್ನ ಹಸಿದವರಿಗದೇ ಚಿನ್ನ".

# ಗಣರಾಜ್ಯ ದಿನಾಚರಣೆ

**26 ಜನವರಿ 2023ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ಆಚರಿಸಿದ 74ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳು, ಜಾನಪದ ತಜ್ಞರು ಮತ್ತು ರಾಜ್ಯ ಪ್ರಕಟಣೆಗಳ ಸಮಿತಿಯ ಅಧ್ಯಕ್ಷರಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಧ್ವಜಾರೋಹಣ ನೆರವೇರಿಸಿದ ನಂತರ ನೀಡಿದ ಸಂದೇಶ**

ನಮ್ಮ ದೇಶದಲ್ಲಿ ಗೌರಿ, ಗಣೇಶ, ದೀಪಾವಳಿ, ಯುಗಾದಿ ಮೊದಲಾದ ಹಬ್ಬಗಳನ್ನು ಆಚರಿಸಲಾಗುತ್ತದೆ. ಈ ಆಚರಣೆಗಳೆಲ್ಲ ಧಾರ್ಮಿಕ ಮತ್ತು ಕೌಟುಂಬಿಕ. ಹಾಗೆಯೇ ನಮಗೆ ಸ್ವಾತಂತ್ರ್ಯ ಬಂದ ನಂತರ ಆಚರಿಸುತ್ತಿರುವ ರಾಷ್ಟ್ರೀಯ ಹಬ್ಬಗಳಿವೆ, ಅಂತಹ ಹಬ್ಬಗಳೆಂದರೆ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆ ಮತ್ತು ಜನವರಿ 26ರ ಗಣರಾಜ್ಯ ದಿನಾಚರಣೆ, ಕರ್ನಾಟಕದಲ್ಲಿ ಆಚರಿಸುವ ನವೆಂಬರ್ 01ರ ಕನ್ನಡ ರಾಜ್ಯೋತ್ಸವ. ಧಾರ್ಮಿಕ ಹಬ್ಬಗಳು ನಮ್ಮ ನಮ್ಮ ಮನೆಗಳಿಗೆ ಸೀಮಿತವಾಗಿದ್ದರೆ, ರಾಷ್ಟ್ರೀಯ ಹಬ್ಬಗಳಲ್ಲಿ ಎಲ್ಲ ಭಾಷೆಯ ಎಲ್ಲ ವರ್ಗದ ಜನರೂ ಪಾಲುಗೊಳ್ಳುತ್ತಾರೆ.

ಇಂದು ನಾವು ಭಾರತದ 74ನೆಯ ಗಣರಾಜ್ಯ ದಿನಾಚರಣೆಯ ಅಂಗವಾಗಿ ರಾಷ್ಟ್ರಧ್ವಜಾರೋಹಣ ಕಾರ್ಯಕ್ರಮಕ್ಕೆ ಸೇರಿದ್ದೇವೆ. ಯಾವುದೇ ರಾಷ್ಟ್ರಕ್ಕೆ ತನ್ನದೇ ಆದ ಕೆಲವು ಗುರುತುಗಳಿರುತ್ತವೆ.  ಅವೆಂದರೆ ರಾಷ್ಟ್ರಧ್ವಜ – National Flag; ರಾಷ್ಟ್ರಗೀತೆ - National Anthem ರಾಷ್ಟ್ರಸ್ತವ – National Prayer; ರಾಷ್ಟ್ರ ಸಂವಿಧಾನ – National Constitution; ರಾಷ್ಟ್ರ ಭಾಷೆ – National Language; ರಾಷ್ಟ್ರ ಲಾಂಛನ – National Logo; ರಾಷ್ಟ್ರಮುದ್ರೆ – National Seal.

ನಮ್ಮ ರಾಷ್ಟ್ರಧ್ವಜ– ತ್ರಿವರ್ಣ ಧ್ವಜ, ರಾಷ್ಟ್ರಗೀತೆ– ಜನಗಣಮನ, ರಾಷ್ಟ್ರಸ್ತವ– ವಂದೇ ಮಾತರಂ, ರಾಷ್ಟ್ರಭಾಷೆ– ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳು, ರಾಷ್ಟ್ರ ಸಂವಿಧಾನ– ಪ್ರಜಾಪ್ರಭುತ್ವ, ರಾಷ್ಟ್ರಲಾಂಛನ–ಅಶೋಕ ಚಕ್ರ, ರಾಷ್ಟ್ರಮುದ್ರೆ– ಸಿಂಹಶೀರ್ಷ. ನಮ್ಮ ಸಂವಿಧಾನದ ಪ್ರಕಾರ, ಈ ಯಾವುದೇ ಚಿಹ್ನೆಗಳಿಗೆ ಯಾರೇ ಅಪಮಾನ ಮಾಡಿದರೆ ಅದು ಅಪರಾಧವಾಗುತ್ತದೆ. ಅಂತಹ ಅಪರಾಧ ಮಾಡಿದವರಿಗೆ ಕಾನೂನಿನ ಪ್ರಕಾರ ಶಿಕ್ಷೆ ವಿಧಿಸಲಾಗುತ್ತದೆ.

ರಾಷ್ಟ್ರದ ಪ್ರತಿಯೊಬ್ಬರೂ ನಮ್ಮ ರಾಷ್ಟ್ರೀಯ ಚಿಹ್ನೆಗಳಿಗೆ ಗೌರವ ಕೊಡಬೇಕು. ಈಗ ನಾವು ಆರೋಹಿಸಿರುವ ರಾಷ್ಟ್ರಧ್ವಜಕ್ಕೆ ಮತ್ತು ಅದು ಪ್ರತಿನಿಧಿಸುವ ಸಾರ್ವಭೌಮ ಪ್ರಜಾಪ್ರತ್ತಾತ್ಮದ ಗಣರಾಜ್ಯದ ಸಂವಿಧಾನಕ್ಕೆ ನಿಷ್ಠರಾಗಿರುತ್ತೇವೆ ಎಂದು ಈ ಸಂದರ್ಭದಲ್ಲಿ ನಾವೆಲ್ಲ ಪ್ರತಿಜ್ಞೆ ಮಾಡಬೇಕು. ಸ್ಕೌಟ್–ಗೈಡ್ಸ್ ಚಳವಳಿಯ ಧ್ವಜದ ಮುಂದೆ, ನಾವು ಈ ಚಳವಳಿಗೆ ಬದ್ಧರಾಗಿರುತ್ತೇವೆ ಎಂದು ಪ್ರಮಾಣ ವಚನ ಸ್ವೀಕರಿಸುವಂತೆ, ರಾಷ್ಟ್ರಧ್ವಜ ಎದುರು ರಾಷ್ಟ್ರ ಪ್ರತಿಜ್ಞೆ ಸ್ವೀಕರಿಸಬೇಕು.

ಭಾರತದ ರಾಷ್ಟ್ರಧ್ವಜವನ್ನು 1947ರ ಆಗಸ್ಟ್ 15 ರಂದು ನಮಗೆ ಸ್ವಾತಂತ್ರ್ಯ ಬಂದಾಗ ಅಧಿಕೃತವಾಗಿ ದೆಹಲಿಯ ಕೆಂಪುಕೋಟೆಯ ಮೇಲೆ ಹಾರಿಸಲಾಯಿತು. ಈ ಧ್ವಜ ಅಂತಿಮ ರೂಪತಾಳಲಿಕ್ಕೆ 116 ವರ್ಷಗಳ ಇತಿಹಾಸವಿದೆ. ಬ್ರಿಟಿಷರು ನಮ್ಮನ್ನು ಆಳುತ್ತಿದ್ದಾಗ 1906ರಲ್ಲಿ ಕಲ್ಕತ್ತಾದ ಗ್ರೀನ್ ಪಾರ್ಕಿನಲ್ಲಿ ನಡೆದ ಅಧಿವೇಶನದಲ್ಲಿ ಮೊದಲ ರಾಷ್ಟ್ರಧ್ವಜ ಹಾರಿಸಲಾಯಿತು. 1915ರಲ್ಲಿ ಅನಿಬೆಸೆಂಟ್ ಮತ್ತು ಬಾಲಗಂಗಾಧರ ತಿಲಕರು ಹೊಸ ಧ್ವಜವನ್ನು ರೂಪಿಸಿದರು. 1931ರಲ್ಲಿ ಹೈದರಾಬಾದ್ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಹೊಸ ಧ್ವಜ ರೂಪು ತಾಳಿತು. 1931ರಲ್ಲಿ ಸರ್ದಾರ್ ವಲ್ಲಭಬಾಯ್ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಇಂದಿನ ತ್ರಿವರ್ಣ ಧ್ವಜ ಹಾರಿಸಲ್ಪಟ್ಟಿತು.

ನಮ್ಮ ಧ್ವಜದಲ್ಲಿನ ಮೂರು ವರ್ಣಗಳೆಂದರೆ ಕೇಸರಿ, ಬಿಳುಪು ಮತ್ತು ಹಸಿರು. ಕೇಸರಿ ಬಣ್ಣ ಧೈರ್ಯ, ತ್ಯಾಗ, ವೈರಾಗ್ಯಗಳ ಸಂಕೇತವಾಗಿದ್ದರೆ. ಮಧ್ಯ ಇರುವ ಬಿಳುಪು ಸತ್ಯ, ಶಾಂತಿ, ಬೆಳಕುಗಳ ಸಂಕೇತವಾಗಿದೆ. ಕೆಳಗಿನ ಹಸಿರು ಬಣ್ಣ ಶ್ರದ್ಧೆ, ಶಕ್ತಿ, ಸಮೃದ್ಧಿಗಳನ್ನು ಸೂಚಿಸಿದರೆ, ಮಧ್ಯದ ಬಿಳಿಪಟ್ಟೆಯಲ್ಲಿರುವ ಚಕ್ರ ದೇಶದ ಆರ್ಥಿಕ ಪ್ರಗತಿಯ ಸಂಕೇತವಾಗಿದೆ. ಸ್ವತಂತ್ರ ಭಾರತದ ಈ ರಾಷ್ಟ್ರಧ್ವಜಕ್ಕೆ 1942ರಲ್ಲಿ ನಡೆದ 'ಕ್ವಿಟ್ ಇಂಡಿಯಾ' ಚಳವಳಿಯೇ ಸ್ಫೂರ್ತಿಯಾಗಿದೆ.

ನಮ್ಮ ದೇಶದ ಗಡಿಯನ್ನು ರಕ್ಷಿಸಲು ಮತ್ತು ಬೇರೆ ಯಾವುದಾದರೂ ದೇಶ ನಮ್ಮ ದೇಶದ ಮೇಲೆ ನಡೆಸಬಹುದಾದ ದಾಳಿಯನ್ನು ತಡೆಗಟ್ಟಲು ಭೂಸೈನ್ಯ, ನೌಕಾದಳ ಮತ್ತು ವಾಯು ದಳಗಳಿವೆ. ಹಾಗೆಯೇ ಒಳನಾಡಿನ ಕಾನೂನು ಮತ್ತು ಶಾಂತಿಯನ್ನು ಕಾಪಾಡಲು ಪೋಲಿಸ್ ವ್ಯವಸ್ಥೆಯಿದೆ. ಇದನ್ನೆಲ್ಲ ನೋಡಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿವೆ.

ಆದರೂ ಕೆಲವರು ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡು ದೇಶದ ಶಾಂತಿಗೆ ಭಂಗ ಉಂಟು ಮಾಡುತ್ತಾರೆ. ಆದ್ದರಿಂದ ದೇಶದ ಪ್ರತಿಯೊಬ್ಬರೂ ಜಾಗೃತವಾಗಿದ್ದುಕೊಂಡು, ಅಂತಹ ದುಷ್ಟಶಕ್ತಿಗಳು ಬೆಳೆಯದಂತೆ ನೋಡಿಕೊಳ್ಳಬೇಕಾಗುತ್ತದೆ. ನಾವು ಅಂತಹ ಜಾಗ್ರತ ವ್ಯಕ್ತಿಗಳಾಗಲು ಒಳ್ಳೆಯ ಜೀವನ ಸೂತ್ರಗಳನ್ನು ಅನುಸರಿಸಬೇಕು. ಅನುಭವಿಯೊಬ್ಬರು ಅಂತಹ ಎಂಟು ಸೂತ್ರಗಳನ್ನು ಹೇಳಿದ್ದಾರೆ. ಆ ಸೂತ್ರಗಳೆಂದರೆ,

ಒಂದನೆಯದು:  Simplify Your Wants –  ನಿನ್ನ ಅಗತ್ಯಗಳನ್ನು ಸರಳಗೊಳಿಸು

ಎರಡನೆಯದು:  Nullify Your Geed –  ನಿನ್ನ ಅತ್ಯಸೆಗಳನ್ನು ಅಡಗಿಸು

ಮೂರನೆಯದು:  Amplify Your Works - ನಿನ್ನ ಕೆಲಸವನ್ನು ವೃದ್ಧಿಗೊಳಿಸು

ನಾಲ್ಕನೆಯದು:  Rectify Your Mistakes - ನಿನ್ನ ತಪ್ಪುಗಳನ್ನು ಸರಿಪಡಿಸಿಕೋ

ಐದನೆಯದು:  Justify Your Expanses - ನಿನ್ನ ವೆಚ್ಚಗಳನ್ನು ಸಾರ್ಥಕಗೊಳಿಸುವ

ಆರನೆಯದು:  Certify Your Conduct - ನಿನ್ನ ನಡತೆಯನ್ನು ದೃಢಪಡಿಸು

ಏಳನೆಯದು:  Magnify Your Mind - ನಿನ್ನ ಮನಸ್ಸನ್ನು ವಿಶಾಲಗೊಳಿಸು

ಎಂಟನೆಯದು:  Glorify Your Future - ನಿನ್ನ ಭವಿಷ್ಯವನ್ನು ಉಜ್ವಲಗೊಳಿಸು

ಈ ಸೂತ್ರಗಳ ಪಾಲನೆಯಿಂದ ವ್ಯಕ್ತಿ ಶುದ್ಧ ವ್ಯಕ್ತಿ ಎನಿಸಿಕೊಳ್ಳುತ್ತಾನೆ. ಸಮಾಜಕ್ಕೆ ಬೇಕಾದ ವ್ಯಕ್ತಿಯಾಗುತ್ತಾನೆ.

ನವ ಭಾರತ ನಿರ್ಮಾಣಕ್ಕಾಗಿ ಪ್ರತಿಯೊಬ್ಬ ಭಾರತೀಯನೂ ಅಂತಹ ಶುದ್ಧ ವ್ಯಕ್ತಿಯಾಗಬೇಕು. ದೇಶದ ಒಳಿತಿಗಾಗಿ ತನ್ನ ಭಾಗದ ಸೇವೆ ಸಲ್ಲಿಸುವಂತಾಗಬೇಕು. ಗಣರಾಜ್ಯೋತ್ಸವದ ಈ ಸಂದರ್ಭದಲ್ಲಿ ನಾವೆಲ್ಲ ನಮ್ಮ ರಾಷ್ಟ್ರಕ್ಕೆ ನಮ್ಮನ್ನು ಸಮರ್ಪಿಸಿಕೊಳ್ಳೋಣ.

ಇಂದಿನ ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಸಂಸ್ಥೆಯ ಉಪಾಧ್ಯಕ್ಷರೂ, ಎರಡು ದಶಕಗಳ ಕಾಲ ರಾಜ್ಯ ಮುಖ್ಯ ಆಯುಕ್ತರಾಗಿದ್ದ ಶ್ರೀ ಕೆ.ಬಿ. ಷಣ್ಮುಖಪ್ಪ ಅವರೇ ವಹಿಸಿರುವುದು ತುಂಬಾ ಉಚಿತವಾಗಿದೆ. ಅವರು ತಮ್ಮ ಇಡೀ ಜೀವನವನ್ನು ಸ್ಕೌಟ್ ಮತ್ತು ಗೈಡ್ ಚಳವಳಿಗಾಗಿ ಮೀಸಲಿಟ್ಟವರು. ಅವರು ಇತರ ಅನೇಕ ಸಂಘಟನೆಗಳಲ್ಲಿದ್ದರೂ, ಅವರ ಉಸಿರೆಲ್ಲ ಸ್ಕೌಟ್ಸ್ ಮತ್ತು ಗೈಡ್ಸ್. ಇಂದಿನ ಸ್ಕೌಟ್ ಮತ್ತು ಗೈಡ್ ಮಕ್ಕಳು ಅವರ ಆದರ್ಶವನ್ನು ಪಾಲಿಸುವಂತಾಗಲಿ ಎಂದು ಆಶಿಸುತ್ತೇನೆ.

ನಮ್ಮ ರಾಜ್ಯದ ಮುಖ್ಯ ಆಯುಕ್ತರಾದ ಮಾನ್ಯಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರ ನೇತೃತ್ವದಲ್ಲಿ ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿ ಇಡೀ ರಾಷ್ಟ್ರದಲ್ಲೇ ಒಂದು ಪ್ರತಿಷ್ಠಿತ ಸ್ಥಾನ ಪಡೆದಿರುವುದು ಸಹಜವಾಗಿಯೇ ನಮಗೆಲ್ಲಾ ಅಭಿಮಾನ ಉಂಟು ಮಾಡಿದೆ.

ನಮ್ಮ ರಾಜ್ಯದ ಸ್ಕೌಟ್ಸ್–ಗೈಡ್ ಬಂಧುಗಳಿಂದ ನಮ್ಮ ರಾಷ್ಟ್ರಕ್ಕೆ ಇನ್ನು ಹೆಚ್ಚಿನ ಸೇವೆ ಸಲ್ಲಿಸುವಂತಾಗಲಿ ಎಂದು ಹಾರೈಸುತ್ತೇನೆ.



## ರಾಜ್ಯ ಕೇಂದ್ರ ಕಛೇರಿಯಲ್ಲಿ

# 74ನೇ ಗಣರಾಜ್ಯೋತ್ಸವ



26 ಜನವರಿ 2023 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ಬೆಂಗಳೂರಿನ ಶಾಂತಿಗೃಹದಲ್ಲಿ 74ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಹಿರಿಯ ಸಾಹಿತಿಗಳು ಮತ್ತು ಜಾನಪದ ತಜ್ಞರು ಹಾಗೂ ರಾಜ್ಯ ಪ್ರಕಟಣಾ ಸಮಿತಿಯ ಅಧ್ಯಕ್ಷರಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪನವರು ರಾಷ್ಟ್ರಧ್ವಜವನ್ನು ಅರಳಿಸಿ ಗಣರಾಜ್ಯೋತ್ಸವದ ಬಗ್ಗೆ ವಿವರವಾಗಿ ಸಂದೇಶ ನೀಡಿದರು. ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಎನ್. ಶ್ರೀನಿವಾಸನ್, ಸಹಾಯಕ ಕಾರ್ಯದರ್ಶಿ ಶ್ರೀ ಎಲ್.ಟಿ ಲೋಕೇಶ್, ರಾಜ್ಯ ಸಂಘಟನಾ ಆಯುಕ್ತೆ ಶ್ರೀಮತಿ ಸಿ. ಮಂಜುಳಾ, ರಾಜ್ಯ ತರಬೇತಿ ಆಯುಕ್ತರುಗಳಾದ ಶ್ರೀ ನಾಗೇಶ್ ಶಿವಪುರ್ ಮತ್ತು ಶ್ರೀಮತಿ ಕೆ.ವಿ. ಶಾಮಲ, ದಕ್ಷಿಣ ಪ್ರಾಂತೀಯ ಸಹಾಯಕ ನಿರ್ದೇಶಕರಾದ ಶ್ರೀಮತಿ ಕುಮುದ್ ಮೆಹರಾ, ಪಿ.ಆರ್.ಓ. ಶ್ರೀ ಕೆ.ಹೆಚ್. ಜಯರಾಮಯ್ಯ, ಎ.ಎಸ್.ಓ.ಸಿ. ಶ್ರೀಮತಿ ಕುಮಾರಿ ಹೊನ್ನಮ್ಮ, ಕಛೇರಿ ಸಿಬ್ಬಂದಿ ವರ್ಗ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಹಾಗೂ ಬಿ.ಬಿ.ಎಂ.ಪಿ. ಜಿಲ್ಲೆಗಳ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.





# ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಆಯುಕ್ತರು (ಸ್ಕೌಟ್ಸ್–ಗೈಡ್ಸ್) ಜಿಲ್ಲಾ ಕಾರ್ಯದರ್ಶಿಗಳು ಮತ್ತು ಜಿಲ್ಲಾ ಕೋಶಾಧಿಕಾರಿಗಳ ಸಭೆ

ಜನವರಿ 25 ಮತ್ತು 26, 2023ರಂದು ರಾಜ್ಯ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಇವರ ಸಹಯೋಗದಲ್ಲಿ ಶ್ರೀ ಪಿ.ಜಿ.ಆರ್ ಸಿಂಧ್ಯ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಆಯುಕ್ತರು (ಸ್ಕೌಟ್ / ಗೈಡ್), ಜಿಲ್ಲಾ ಕಾರ್ಯಾದರ್ಶಿಗಳು ಮತ್ತು ಜಿಲ್ಲಾ ಕೋಶಾಧಿಕಾರಿಗಳ ಸಭೆಯನ್ನು "ಸ್ಕೌಟ್ ಗೈಡ್ ಕನ್ನಡ ಭವನ, ಮೂಡುಬಿದಿರೆ" ಇಲ್ಲಿ ಸಂಘಟಿಸಲಾಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ 75 ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಡಾ. ಎಂ ಮೋಹನ್ ಆಳ್ವಾ, ಜಿಲ್ಲಾ ಮುಖ್ಯ ಆಯುಕ್ತರು ಮತ್ತು ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಸಂಸ್ಥೆ, ಮೂಡುಬಿದಿರೆ ಇವರು ಈ ಕಾರ್ಯಕ್ರಮದ ಪ್ರಾರಂಭದಲ್ಲಿ ಜಾಂಬೂರಿಯ ವಿವರವಾದ ವರದಿಯನ್ನು ನೀಡಿದರು ಮತ್ತು ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿದರು. ಸ್ಕೌಟಿಂಗ್ ಅಭಿವೃದ್ದಿಯ ಬಗ್ಗೆ ರಾಜ್ಯ, ಜಿಲ್ಲಾ ಮತ್ತು ಸ್ಥಳಿಯ ಸಂಸ್ಥೆಯ ಪದಾಧಿಕಾರಿಗಳು ನಿರ್ವಹಿಸಬೇಕಾದ ಕಾರ್ಯಗಳು ಮತ್ತು ರಾಜ್ಯ ಸರ್ಕಾರದಿಂದ ಅಪೇಕ್ಷಿಸುವ ಸಹಕಾರಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸುವಂತೆ ಶ್ರೀ ಪಿ.ಜಿ.ಆರ್ ಸಿಂಧ್ಯ ಅವರ ಸೂಚನೆಯಂತೆ ಚರ್ಚಿಸಿ ಎಲ್ಲರ ಅಭಿಪ್ರಾಯಗಳನ್ನ ಪಡೆದು ರಾಜ್ಯ ಸಂಸ್ಥೆಯ ಸೂಕ್ತ ಸಭೆಯಲ್ಲಿ ತೀರ್ಮಾನಿಸಲು ಶಿಫಾರಸ್ಸುಗಳನ್ನು ಮಾಡಲಾಯಿತು.

ಅಂತಾರಾಷ್ಟ್ರೀಯ ಸ್ಕೌಟ್–ಗೈಡ್ ಸಾಂಸ್ಕೃತಿಕ ಜಾಂಬೂರಿ ಯಶಸ್ಸಿಯಾಗಿ ಜರಗಿರುವ ಬಗ್ಗೆ ಎಲ್ಲಾ ಜಿಲ್ಲೆಗಳ ಆಯುಕ್ತರು, ಕಾರ್ಯದರ್ಶಿಗಳು ಅಭಿಪ್ರಾಯ ತಿಳಿಸಿದರು. ಭಾಗವಹಿಸಿದ ಎಲ್ಲರಿಗೂ ಜಾಂಬೂರಿ ಸ್ಮರಣಿಕೆಯನ್ನು ಶ್ರೀ ಪಿ.ಜಿ.ಆರ್ ಸಿಂಧ್ಯ ರವರು ನೀಡಿದರು.

ಜನವರಿ 26, 2023ರಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ಜರಗಿದ 74ನೇ ಗಣರಾಜ್ಯೋತ್ಸವದ ಆಚರಣೆಯಲ್ಲಿ ನಿಟ್ಟೆ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಎನ್. ವಿನಯ್ ಹೆಗ್ಡೆಯವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ನೆರವೇರಿಸಿದರು. ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ರಾಜ್ಯದ ಹಲವು ಜಿಲ್ಲೆಗಳ ಜಿಲ್ಲಾ ಮುಖ್ಯ ಆಯುಕ್ತರುಗಳು, ಜಿಲ್ಲಾ ಆಯುಕ್ತರುಗಳು (ಸ್ಕೌಟ್–ಗೈಡ್), ಜಿಲ್ಲಾ ಕಾರ್ಯಾದರ್ಶಿಗಳು ಮತ್ತು ಜಿಲ್ಲಾ ಕೋಶಾಧಿಕಾರಿಗಳು ಭಾಗವಹಿಸಿದ್ದರು. ಬಳಿಕ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ್ ಆಳ್ವಾ ಅವರ ನಿವಾಸ, ಶೋಭ ಅತಿಥಿ ಗೃಹದಲ್ಲಿ ನಡೆದ ಸಭೆಯಲ್ಲಿ, ಭಾಗವಹಿಸಿದ ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದರು.

ಸಂಜೆ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ಜಾಂಬೂರಿ ಯಶಸ್ಸಿಗೆ ಸಹಕರಿಸಿದವರೆಲ್ಲರಿಗೂ ಅಭಿನಂದನೆ ತಿಳಿಸಿ ಅಂತಾರಾಷ್ಟ್ರೀಯ ಸ್ಕೌಟ್ಸ್–ಗೈಡ್ಸ್ ಸಾಂಸ್ಕೃತಿಕ ಜಾಂಬೂರಿ ಸವಿನೆನಪಿಗಾಗಿ ಸ್ಕೌಟ್–ಗೈಡ್ ಯುವಶಕ್ತಿ ಕೇಂದ್ರ ನಿರ್ಮಾಣದ ಬಗ್ಗೆ ವಿಚಾರ ವಿನಿಮಯ ನಡೆಸಲಾಯಿತು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಅಧ್ಯಕ್ಷತೆ ವಹಿಸಿದ್ದರು. ಡಾ. ಮೋಹನ್ ಆಳ್ವಾ ರವರು ಜಾಂಬೂರಿಯ ವಿವರಣೆಯನ್ನು ನೀಡಿದರು. ಶ್ರೀ ನಾಗರಾಜ ಶೆಟ್ಟಿ, ಮಾಜಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಇತರರು ಉಪಸ್ಥಿತರಿದ್ದರು.







ಜನವರಿ 26, 2023ರಂದು ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ 74ನೇ ಗಣರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ನಿಟ್ಟೆ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಎನ್. ವಿನಯಹೆಗ್ಡೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಎಂ. ಮೋಹನ್ ಆಳ್ವ, ಟ್ರಸ್ಟಿಗಳಾದ ಶ್ರೀ ವಿವೇಕ್ ಆಳ್ವ, ಡಾ॥ ವಿನಯ ಆಳ್ವ, ಉದ್ಯಮಿ ಶ್ರೀ ಶ್ರೀಪತಿ ಭಟ್, ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಸ್ಕೌಟ್-ಗೈಡ್ ಆಯುಕ್ತರುಗಳು, ಕಾರ್ಯದರ್ಶಿಗಳು, ರಾಜ್ಯ ಸಂಸ್ಥೆ ಪದಾಧಿಕಾರಿಗಳು, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಮತ್ತು ಇತರರು ಭಾಗವಹಿಸಿದ್ದರು.



# ಸಂಕ್ರಾಂತಿ ಹಬ್ಬ

– ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ
ಮಕ್ಕಳ ಹೃದಯತಜ್ಞರು

ಇತ್ತೀಚೆಗೆ ಪಾಶ್ಚಾತ್ಯರ ಹೊಸವರ್ಷದ ಜನವರಿ ಒಂದರ ಹಬ್ಬ ನಂತರ ಜನವರಿ 15 ರಂದು ಮಕರ ಸಂಕ್ರಮಣ ಆಚರಿಸಿದೆವು. ದುರಂತವೆಂದರೆ ಇಂದಿನ ಯುವ ಪೀಳಿಗೆಗೆ ವಿಕೃತಿ ಸಂಸ್ಕೃತಿಗಳ ವ್ಯತ್ಯಾಸ ಗೊತ್ತಿಲ್ಲದೆ ಭಾರತೀಯ ಸಂಸ್ಕೃತಿಯನ್ನು ಮರೆತು ವಿದೇಶಿ ವಿಕೃತಿ ಮೆರೆದದ್ದು ದುರದೃಷ್ಟಕರ! ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಹೊಸವರುಷದ ಆಚರಣೆಗೆ 518 ಕೋಟಿ ರೂಪಾಯಿಯ ಸರಾಯಿ ವಹಿವಾಟು ಮಾಡಿ 2.39 ಲಕ್ಷ Carton Boxes ಮಾರಾಟ ಮಾಡಿದ್ದು ದಾಖಲೆ. ಸರಾಯಿ ಸರ್ವನಾಶಕ್ಕೆ ಕಾರಣ, ಶರೀರದ ಎಲ್ಲಾ ಅವಯವಗಳನ್ನು ನಾಶಮಾಡುವುದರ ಜೊತೆಗೆ ಪ್ರತೀ ಸಲ ಕುಡಿದಾಗ 8–10 ಸಾವಿರ ಮೆದುಳಿನ ಜೀವಕಣಗಳನ್ನು ಸಾಯಿಸಿ, ಮನಸ್ಸಿನ ದುಗುಡ ಹೆಚ್ಚಿ ಪ್ರಾಣಿಗಳಂತೆ ಪ್ರಜ್ಞಾಶೂನ್ಯ ಮಾಡುವ ಸರಾಯಿಗೆ ಜನ ಮಾರುಹೋಗುತ್ತಿದ್ದಾರೆ!

ಆದರೆ ವರ್ಷದಲ್ಲಿ 12 ಸಂಕ್ರಮಣ ಬಂದರೂ ಮಕರ ಸಂಕ್ರಾಂತಿ ಅತ್ಯಂತ ಶ್ರೇಷ್ಠವಾದದ್ದು. ಅಂದು ನಾವು ಅಭ್ಯಂಗ ಸ್ನಾನ ಮಾಡಿ ನಿಸರ್ಗದೊಂದಿಗೆ ಸಂಭ್ರಮಿಸಿ ಎಳ್ಳೂ-ಬೆಲ್ಲ ಜನರಿಗೆ ಹಂಚಿ ನಾವೂ ನೀವು ಎಳ್ಳೂ-ಬೆಲ್ಲದಂತಿರೋಣ ಸಿಹಿ ಸಿಹಿ ಮಾತನಾಡೋಣ ಎಂಬ ಉತ್ಕೃಷ್ಟ ಸಂಸ್ಕಾರ ಸಾರುವ ಹಬ್ಬ. ಅದರಲ್ಲೂ ಬೆಲ್ಲ ನಮ್ಮ ಶರೀರಿನಲ್ಲಿ ರಕ್ತವನ್ನು ಶುಚಿಗೊಳಿಸಿ, ಕಬ್ಬಿಣ ಮಿನರಲ್ಸ್ ಸರಬರಾಜು ಮಾಡಿ ನಮ್ಮ ನರಮಂಡಲವನ್ನು ಉತ್ತಮಗೊಳಿಸಿ ನಮ್ಮ ದಣಿವಾರಿಸುವ ಕೆಲಸ ಮಾಡುತ್ತದೆ. ಆಯುರ್ವೇದದ ಔಷಧಿಗಳಲ್ಲಿ ಬೆಲ್ಲವನ್ನು ಉಪಯೋಗಿಸುವ ಪದ್ಧತಿ ಸಹಸ್ರಾರು ವರ್ಷಗಳಿಂದ ಬಂದಿದೆ. ಅದರ ಜೊತೆಗೆ ಶ್ವಾಸಕೋಶದ ಕಾಯಿಲೆ ಕಡಿಮೆ ಮಾಡಿ, ತೂಕ ನಿಯಂತ್ರಿಸಲು, ರಕ್ತದ ಒತ್ತಡ ಕಡಿಮೆ ಮಾಡಲು, ಯಕೃತಿ ಶುದ್ಧಿಗೊಳಿಸುತ್ತದೆ. ನಮ್ಮ ಬೆಲ್ಲ. ಆದರೆ ಸರಾಯಿ ಯಕೃತ ನಾಶಗೊಳಿಸಿ Alcohalic Cirrhosis ನಿಂದ ಸಾಯಿಸುತ್ತದೆ ಎಂದು ಜನರು ಅರಿಯಬೇಕು. ಬೆಲ್ಲದೊಂದಿಗೆ ಎಳ್ಳು ಸೇರಿಸಿದಾಗ ಕೇವಲ ಬಾಯಿ ರುಚಿ ಅಷ್ಟೇ ಅಲ್ಲ ತಿಂದ ಆಹಾರ ಜೀರ್ಣವಾಗಿಸುತ್ತದೆ. ಹೃದಯವನ್ನು ಸದೃಢ ಮಾಡುತ್ತದೆ. ಮೂಳೆಗಳನ್ನು ಗಟ್ಟಿ ಮಾಡುತ್ತದೆ. ಬಿ.ಪಿ. ಕಡಿಮೆ ಮಾಡಿ ಕ್ಯಾನ್ಸರ್ ಬರದಂತೆ ಜೀವ ಕಣಗಳನ್ನು ಕಾಪಾಡುತ್ತದೆ. ನಮ್ಮ ತ್ವಚೆ, ಕೂದಲುಗಳಿಗೆ ಹೊಳಪು ತಂದು ಸುಂದರಗೊಳಿಸುತ್ತದೆ. ಆದ್ದರಿಂದ ಮಕ್ಕಳು ಮತ್ತು ಯುವಕರು ಭಾರತೀಯ ಪರಂಪರೆ ಪಾಲಿಸಿ ಉತ್ತಮ ಜೀವನ ನಡೆಸಿಬೇಕು. ಪಾಶ್ಚಾತ್ಯಾಪ ಅಂಥ ಅನುಕರಣೆ ಮಾಡಿ ವಿಕೃತಿ ಮರೆಯಬಾರದು. ಎಲ್ಲರಿಗೂ ಶುಭವಾಗಲಿ... ನಮಸ್ಕಾರ.




Mr. A.S. Madhusudan, Addl. International Commissioner
Celebrated 74th Republic Day at Indian High Commission Bangladesh Along with Indian High Commissioner Shri. Pranay Verma

# ಅಭಿನಂದನೆಗಳು









74ನೇ ಗಣರಾಜ್ಯೋತ್ಸವ ಸಂದರ್ಭದಲ್ಲಿ ಹಾಸನ ಜಿಲ್ಲಾಡಳಿತ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿಯಿಂದ ಪರಿಸರ ಕ್ಷೇತ್ರದಲ್ಲಿ ಕಳೆದ 20 ವರ್ಷಗಳಿಂದ ಪರಿಸರದ ಉಳಿವಿಗಾಗಿ ಒಂದು ಲಕ್ಷಕ್ಕೂ ಅಧಿಕ ವಿವಿಧ ಜಾತಿಯ ಹಣ್ಣಿನ ಗಿಡಗಳು ಮತ್ತು ಜೈವಿಕ ಇಂಧನ ಸಸಿಗಳನ್ನು ನೆಟ್ಟು ಕಾಪಾಡುತ್ತಿರುವ ಅಮೋಘವಾದ ಸೇವೆಯನ್ನು ಗುರುತಿಸಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಹಾಸನದ 'ಏಕಲವ್ಯ ರೋವರ್ ಮುಕ್ತದಳ'ದ ರೋವರ್ ಸ್ಕೌಟ್ಸ್ ಲೀಡರ್ ಆದ ಶ್ರೀ ಆರ್.ಜಿ. ಗಿರೀಶ್ ಅವರನ್ನ ಮಾನ್ಯ ಅಭಕಾರಿ ಸಚಿವರು ಹಾಗು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಕೆ. ಗೋಪಾಲಯ್ಯ ಅವರು ಪ್ರಶಸ್ತಿ ನೀಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಾನ್ಯ ಶಾಸಕರಾದ ಶ್ರೀ ಪ್ರೀತಂ ಜೆ ಗೌಡ, ಜಿಲ್ಲಾಧಿಕಾರಿ ಶ್ರೀಮತಿ ಎಂ.ಎಸ್ ಅರ್ಚನಾ, ಉಪ ವಿಭಾಗಧಿಕಾರಿ ಶ್ರೀ ಜಗದೀಶ್, ಸಿ.ಇ.ಓ. ಶ್ರೀ ಕಾಂತರಾಜ್, ಹಾಸನ ತಾ॥ ದಂಡಾಧಿಕಾರಿ ಶ್ರೀ ಸಂತೋಷ್ ಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶ್ರೀ ಹರೀಶ್ ಇತರರು ಉಪಸ್ಥಿತರಿದ್ದರು.

# Glimpses of International Scouts-Guides Cultural Jamboree

## Pilikula visit















# Glimpses of International Scouts-Guides Cultural Jamboree





## Jamboori Hike











## Jamboori costal walk









ವಿಶ್ವ ಜಾಂಬೂರಿಗೆ ವೀಕೆಂಡ್ ಜನಸಾಗರ...

ನಾಲ್ಕನೇ ದಿನ ಜಾನಪದ ಸಂಸ್ಕೃತಿ ಅನಾವರಣಗೊಳಿಸಿದ ಸ್ಕೌಟ್ಸ್ - ಗೈಡ್ಸ್ ವಿದ್ಯಾರ್ಥಿಗಳು



50 ಅಡಿಯ ಬೃಹತ್ ಗಾಳಿಪಟ



ಜಾಂಬೂರಿಯಲ್ಲೊಂದು 'ಅಪ್ಪ ಮನೆ'!

ಮೂಡುಬಿದಿರೆಯಲ್ಲಿ ಶೂನ್ಯ ತ್ಯಾಜ್ಯ ಕಂಬಳ

ಪ್ರವಾಸಿ ತಾಣಕ್ಕೆ ಭೇಟಿ ನೀಡಿದ ಸ್ಕೌಟ್ಸ್ ಗೈಡ್ಸ್ ವಿದ್ಯಾರ್ಥಿಗಳು



ಜಾಂಬೂರಿಯಲ್ಲಿ ಅಂ.ರಾ. ಯುವ ವೇದಿಕೆ ಸಮಾವೇಶ



24 ಗಂಟೆಯೂ ಉಚಿತ ವೈದ್ಯಕೀಯ ಸೇವೆ | 5 ತುರ್ತು ಚಿಕಿತ್ಸಾ ಘಟಕಗಳು

ಮೂಡುಬಿದಿರೆ: ಜಾಂಬೂರಿ ಆವರಣದಲ್ಲಿ ಆರೋಗ್ಯದ ಕಾಳಜಿ



ತಮಿಳುನಾಡು ಶಿಕ್ಷಣ ಸಚಿವ ಭೇಟಿ

# Students have a field day on 2nd day of Cultural Jamboree

MOODBIDRI, DHNS

Students displayed grit and determination by placing steps cautiously on the swaying 'Monkey bridge', or scaling the 'Russian wall' or climbing a wall made of rubber tyres.

Even the hurdles did not dampen the spirit of differently abled Jagan from Andhra Pradesh. Be it a balancing act or sky cycling, each challenge seemed thrilling than the other at the adventure base set up as part of 25th Scouts and Guides International Cultural Jamboree being organised on the Alva's College campus in Vidyagiri on Thursday.

Students vouched that the experiences from plank walk, Zip line and high ropes had left them with wonderful memories. Oblivious of the scorching sun or the pouring sweat, students eagerly waited for their turn to participate in the adventurous activities.

Some of them, who could not complete the challenges, were seen egging on other participants. Some students took three attempts before clearing a challenge successfully.

Adventure base director Jilly Sequiera said the challenges will help a student to strengthen his will and body.

"A student can participate in 138 different challenges at the adventure base. A student, who completes achieving 20 challenge,s will be rewarded with 'Challenge Valley' badge," Sequiera said.

There 15 trainers to do overall supervision. Trained 200 Rovers and Rangers guided participants through the different challenges.

As many as eight teams with 5,000 Scouts and Guides were involved in a massive Swachhata Abhiyan. Panchayat staff, Asha volunteers, NSS, NCC cadets, local residents, Deputy Commissioner Ravi Kumar M R and DK Zilla Panchayat Chief Executive Officer (CEO) Dr Kumara took part in the Swachhata campaign.

Netravathi team, comprising of 150 members, carried out the cleanliness drive from Vamanjoor to Gurupura on the city's outskirts.

Sharavathi team, comprising of 250 Scouts and Guides, took part in the cleanliness driver organised at five places in Karkala taluk. In total, 250 Scouts and Guides from Shambhavi team cleaned the street from Bappanadu temple near Mulki to Punaroor.

Yettinahole team members cleaned the streets from Bantwal-Moodbidri Junction to Sornadu Anganwadi. Members of Payaswini team were involved in the clean-

## Experiencing grand Jamboree



Students try hand loom weaving with a mentor at a stall on the occasion of the Scouts and Guides International Cultural Jamboree in Moodbidri on Thursday.



Renowned singer Shankar Mahadevan presented a music concert.



Differently abled Jagan from Andhra Pradesh took part in adventure games.



Students have a look at the bottle gourds grown in the farm on the Alva's College campus during the 'Krishi Mela'. DH PHOTOS/ FAKRUDDIN H

## ಸುದ್ದಿ ತಂದ ಪತ್ರಿಕಾ ಮಾಧ್ಯಮ

# 22 kitchens feed 1.3L people every day

Kevin.Mendonsa
@timesgroup.com



MASS FEEDING: People eat lunch at the International Cultural Jamboree of Scouts and Guides at Moodbidri on Thursday

**Moodbidri:** The International Cultural Jamboree, which is going on at Alva's Education Foundation, has been feeding three meals a day, to nearly 1.3 lakh people, including 68,000 Scouts and Guides members.

There are a total of 22 kitchens, including a dedicated public kitchen, currently feeding about 50,000 visitors. According to the kitchen in-charge, the kitchen will feed 15 lakh people in a week.

Chandrahas D Shetty, a resident of Bantwal, and in-charge of the kitchen, says, "I have been in the profession for the past 35 years, taking up contracts for mass feeding projects. Our team of cooks and helpers has fed close to 2 lakh people, which is only for a day. We are feeding more than a lakh people on a daily basis, for a week, for the first time," said Shetty.

Shetty said a total 400 cooks and 1,200 volunteers have been deputed in 21 kitchens, which are operating at 21 hostels belonging to Alva's Education Foundation. At the public kitchen, 200 cooks and 600 volunteers are working day and night.

At the 22 kitchens, the number of guests is fixed at around 55,000 Scouts and Guides, and about 13,000 teachers and volunteers also have to be fed. However, the number varies at the public kitchen. The public kitchen is headed by Surya Bhat and his team.

"The kitchen runs around-the-clock. Firewood is used for cooking," said Shetty adding, "We require at least Rs 1 crore a day, to feed everyone." "The food served here meets all the hygiene requirements, and is tasty and healthy," the participants expressed.

### What's on the menu?

The vegetarian menu has fixed items for breakfast, such as idli and sambar, beaten rice, bread with jam and a choice of tea or coffee. Banana and milk are served to children. For lunch, pulav or ghee rice, rice and sambar, pickle, a vegetable and two types of sweets are served. A similar menu with sweets is served for dinner.

### Mega kitchens with a huge food warehouse

The feeding of lakhs of people requires a sufficient supply of food items, including grocery items and vegetables. In order to ensure smooth delivery of the kitchen supplies, a temporary warehouse has been set up at the campus. According to the warehouse in-charge, KV Jogi, some of the food items in the form of 'hasiru hore kanike,' are being donated by individuals, and the rest are purchased. "We have stocked up on about 500 tonnes of rice, sugar, jaggery, spices, groceries and vegetables. So far we have purchased food items worth Rs 3.5 crore," he said.

The Hasiru hore kanike has come from various districts in the state, in the form of rice, coffee powder from Kodagu, and other items.

20 Dec 2022

# exhibited at Krishi Mela

## 200 Types Of Ayurvedic Medicinal Plants Showcased At Fair

Kevin.Mendonsa
@timesgroup.com

Pics: Ravi Posavanike



CREATIVE EFFORT: Students and public visit Krishi Mela organised as part of International Cultural Jamboree of Scouts and Guides, at Alvas Campus, Moodbidri, on Thursday

**Moodbidri:** The International Cultural Jamboree-2022 at Alva's Education Foundation, Moodbidri, has a major attraction, the Krishi Mela at the MG Kodgi premises. The farm has come up on 12 acres, and has a traditional vegetable garden and many interesting attractions.

INT'L JAMBOREE

The garden has 100 types of vegetables, apart from bananas, coconuts, flowers and cereals, from across the globe. The garden also showcases 530 varieties of paddy. Huge statues of elephants, a yogini, Sri Krishna, mother and child, and a giraffe have been created at the garden.

According to the organisers, the garden took months to plan. They said, "The goal of this Krishi Mela is to make the young generation learn about agriculture, and how food is grown, and kindle an interest in them for farming."

Some of the main attractions at the fair include 40 varieties of vegetables, 530 varieties of paddy, exotic vegetables, six varieties of bottle gourd, pumpkin varieties from abroad, 110 varieties of plantains, plants of various oil seeds, and cereals.

The fair also showcases 40 types of sweet potatoes, some of which are not usually grown anywhere else. Apart from vegetables, paddy and cereals, there are artefacts displayed, which are carved out of coconut.

The rice varieties consist of some near-extinct varieties. Some of the paddy seeds showcased are Kumbala Sale, Sindhura Madhushale, Sannavala, Gandasale, Siddasanna, HMT, Navara, Andanooru Sanna, and Bharma Block. These rice varieties are found in Karnataka, and are unique. Each is known for its aroma, flavour, nutritional value, and medicinal properties. "My aim in displaying these varieties of paddy, is to educate the young generation about it. This is our attempt to preserve them for future generations, and our association has been striving to do this for many years," said Anjaneya AN, president of Sharanamuddanna Savayava Krishikara Balaga.

The organisers also added that the fair is also showcasing 200 types of ayurvedic medicinal plants, 20 varieties of areca, and 110 types of fruits.

### Plantains on display

Vinod Sahadevan Nair, a farmer from Kerala, who is known to have grown more than 400 banana varieties, has brought about 110 varieties to the Krishi Mela.

"I started to grow various banana varieties, after I realised that my father was cured of his ulcer, after eating bananas. It piqued my interest, and I started collecting banana varieties from across India and the globe. I have over 400 varities of plantains. Some of them are known for their medicinal value, but I'm more interested in their conservation," says Nair, who is popularly known as 'Vazha Chettan'.



Scouts and Guides take part at the inaugural function of International Cultural Jamboree in Moodbidri as the procession of decorative umbrellas passes by. DH PHOTO/FAKRUDDIN H

ಮೂಡುಬಿದಿರೆ ಆಳ್ವಾಸ್ ಸಜ್ಜು | ಸಂಭ್ರಮದ ಜಾಂಬೂರಿಯ ಆರಂಭಕ್ಕೆ ಕ್ಷಣಗಣನೆ

# ಅಷ್ಟ ದಿಕ್ಕುಗಳಿಂದಲೂ ಹಸಿರು ಹೊರೆಕಾಣಿಕೆ!



ಶಿಕ್ಷಣ ಕಾಶಿ ಮೂಡುಬಿದಿರೆಯಲ್ಲಿ 'ಸಂಸ್ಕೃತಿ ಅನಾವರಣ'ಕ್ಕೆ ನಡೆದಿದೆ ಶಿಸ್ತುಬದ್ಧ ಸಿದ್ಧತೆ

# ಸಾಂಸ್ಕೃತಿಕ ವೈಭವಕ್ಕೆ ಜಾಂಬೂರಿ ವೇದಿಕೆ ಸಜ್ಜು



# ಸುದ್ದಿ ತಂದ ಪತ್ರಿಕಾ ಮಾಧ್ಯಮ



Students showcase models to the participants at Scouts and Guides International Cultural Jamboree in Moodbidri on Saturday. DH PHOTO/FAKRUDDIN H



A massive kite hung from the building of the Alva's educational institution in Moodbidri.

## Young scientists exhibit talent at science fair in Jamboree

MANGALURU, DHNS

A mixture of custard apple leaf, neem leaf and dry chilies can eliminate pests attacking plants; pressure sensors can save electricity by turning on lamp only when climbing the stairs and spray made from Agnimatana plant leaves can keep flies away were some scientific solutions emerged when students spared a thought for their day-to-day problems.

Hundreds of such models have created a world of wonder at the International Cultural Jamboree in Moodbidri.

The science fair, organised as part of the Jamboree on Alva's Education campus, has exposed the talents of 'young scientists'. Shashank, from Vivekananda High School in Puttur, explaining his project, said a mixture of custard apple, neem leaves and chillies in equal proportion will help in checking pests.

Huzait Sheikh of Christ King School, Karkala, dreams of building a 'smart green house'. He has designed a lamp that lights up with the help of pressure sensors installed in the stairs.

The clothes, drying on the ceiling of his 'dream house', do not get wet even when it rains. He has developed a circuit that closes the ceiling when it rains. They also know how to pump water automatically as soon as the paddy is dry. Praneet Moras, from the Holy Redeemer English Medium School in Belthangady, has designed a dream house with a door that closes to sound.

Mohammad Anas and Nishan Shetty, students of the Moodbidri Rotary School, have devised a new way of using kitchen waste water for hydroponics. A filter made of charcoal, sand, gravel and cotton helps to filter water. If appropriate amount of cow urine and dung is mixed with filtered water, high yield can be obtained in vegetables cultivated using the method of hydroponics.

"There are various models from ISRO, Aeronautical Development Agency, and other central research institutes. The models by high school, primary, engineering, PU college students and startups have been creating awareness on science," science mela convener Dr Yuvaraj said.

On noticing accidents caused by potholes on the road, the students of Canara Engineering College—Vikas M, Sujith K, Bhagyasri M and Swaroopa C K, under the guidance of their lecturer Pavithra H M, have developed an app to help motorists to notice potholes well in advance.

The passengers can get information about quality of roads in advance with help of the app.

### Kite unravelled

A massive 54-foot-long and 16-foot width kite by Team Mangalore was unravelled at the International Cultural Jamboree.

The kite has highlighted the essence of Tulu Nadu, including Bhootharadhane, Kambala, Pilivesha, Nagaradhane, coastal beach, fishing and others.

### TN minister's visit

Tamil Nadu Minister Anbil Mahesh Poyyamozhi visited Jamboree on Saturday. He said that Tamil Nadu has 3.5 lakh Scouts and Guides. "We want to increase the strength to 10 lakh. The government is mulling over increasing funds to Scouts and Guides activities," he said

### CM's arrival

Chief Minister Basavaraj Bommai will arrive at Mangaluru today and take part in International Cultural Jamboree at Moodbidri at 5 pm.

On account of Jamboree, The Pilikula Development Authority will keep all sections at the park open on December 26.

Accordingly, biological park, regional science centre, planetarium, lake garden, botanical garden, museum will remain open.

ALVA'S JOURNALISM

## International Cultural Jamboree: Malaysian guides upbeat over maiden visit to India

This is the biggest among the two foreign contingents that is taking part in the event at the Alva's institution; a small group of scouts and guides from South Korea is also present

Raghava M.
MOODBIDRI





The 15-member contingent from Malaysia that is taking part in the Scouts and Guides International Cultural Jamboree in Moodbidri; and (below) Malaysia Girl Guides Association Chief Commissioner Jeyadhevi Subramaniam. RAGHAVA M.

Naira Dania, a Grade 7 student from Kuala Lumpur, and Tanusya, a Grade 8 student, are excited about the multi-lingual dance they are presenting at the "Ek Bharat Shrest Bharat" activity venue of Scouts and Guides International Cultural Jamboree in Alva's Institution, Moodbidri, on Saturday.

The two had a quick lunch along with 10 of the fellow countrymen guides at a hall near the Alva's Hospital. Then they sat with contingent leaders Melor Edina Binti Pahamin, Jammie Yap and Norliana Alias, and Malaysia Girl Guides Association Chief Commissioner Jeyadhevi Subramaniam, to fine tune the presentation.

"It's a 10-minute-long presentation that showcases the multi-racial culture of our country. Through this dance, we present the Malay, Chinese, Borneo cultures of our country," said Grade 9 student Izza Alzahra.

The 71-year-old Ms. Subramaniam, who has participated in many international jamborees, told *The Hindu* that the idea of presenting the multiracial dance came from their talented artist contingent. "Each of them are capable of presenting dances of different cultures. They conceptualised it and are presenting it in our traditional attire," Ms. Subramaniam said.

Contingent leader Jammie Yap said they are also exhibiting their craft, goods, clothes and dishes made using dry fruits at the same venue.

This 15-member contingent from Malaysia is among two foreign contingents participating in the International Cultural Jamboree, which is underway on campuses of Alva's Institutions. A small group of scouts and guides from South Korea is also taking part in the event.

For majority of students in the Malaysian contingent, its their maiden visit to India.

"Its academic holiday now for us. Hence we undertook this journey for the jamboree here (in Moodbidri), said Grade 9 student Izma Zaahire. Ms. Subramaniam said parents of the guides have borne the cost of journey. Ms. Pahamin said the guides have got acclimatised with the hot weather, cuisine and friendly fellow scouts and guides from different parts of India. Bharath Scouts and Guides have given a team of local volunteers for assistance of Malaysian contingent, she said.

Ms. Subramaniam said another group of 11 guides of Malaysia will take part in the National Jamboree to be held in Jodhpur of Rajasthan between January 4 and 10.

As part of two-year Asia Pacific Reach Out project with Bharath Scouts and Guides, the Malaysia Girl Guides Association will send next year a team of guides to India to study membership pattern and activities of Bharath Scouts and Guides. In exchange, a team from Bharath Scouts and Guides will visit Malaysia in 2024, she said.

## Cultural procession enthrals kids at cultural Jamboree

More Than 109 Performances By Artistes From Across State

Kevin.Mendonsa
@timesgroup.com



DISCIPLINE: Scouts and Guides at the International Cultural Jamboree at Moodbidri on Wednesday

Moodbidri: For more than an hour-and-a-half, the procession featuring performances by many folk artistes was the cynosure of all eyes at the inaugural ceremony at the International Cultural Jamboree-2022 at Alva's College in Moodbidri on Wednesday.

The procession took off after the jamboree was formally flagged off, and featured more than 109 performances. Students of the many institutions under the umbrella of Alva's Education Foundation, volunteers from Scouts and Guides, the NCC, et al, enthralled the crowd at the jamboree, besides performers from not only all parts of Dakshina Kannada but also across the state.

The students and other artistes treated the audience to performances of kombu, chende, kahale, Veeragase, dollu kunitha, Yakshagana, et al. The audience was also treated to a variation of the art forms of coastal Karnataka, with performances of the Kerala Deva Vesha, Kathakli, Srinagari Mela and Theyyam.

### Melas lend colour, flavour to jamboree

As many as five melas – Krishi Siri, Vigyana Mela, Pustaka Mela, Kala Mela, and Aharotsava Mela – are expected to add much more verve to the jamboree.

The Krishi Siri Mela has been organised on a 12-acre plot, and is expected to kindle the interest of the younger generation in agriculture. The venue of the mela also boasts a traditional vegetable garden.

The science exhibition will showcase experiments and models, which will dazzle the minds of both science students, and impress schoolchildren. A voluminous collection of books on a wide array of subjects is bound to draw bibliophiles in huge numbers, while the Kala Mela will feature caricatures, photographs, and various forms of visual creation. For the gourmands at the jamboree, the food mela is bound to leave them spoilt for choice, with an extensive menu of culinary fare likely to whet their appetite.

A flower show, and a fruit-and-vegetable exhibition on campus is certain to add colour and flavour to the jamboree.

## Youth must be ready to serve nation, says governor

TIMES NEWS NETWORK

Moodbidri: Calling on the younger generation to be a part of the nation's journey, governor Thawar Chand Gehlot, said that when needed, individuals should be ready to serve their country, which has given them opportunities to grow.

Gehlot, who is also the patron of Bharat Scouts and Guides, was addressing the gathering of youth, after inaugurating the week-long International Cultural Jamboree-2022, which flagged off at Alva's College, Moodbidri, on Wednesday.

"When Scouts and Guides was started a century ago, it had only a few members. Currently, it has thousands of volunteers spread across the country. They have done a commendable service during the pandemic," he said. The governor also asked the youth to be part of India's journey towards going digital. "Our country belongs to the youth. Our Prime Minister Narendra Modi has asked the young generation to participate in sports. The country will become a new India in another 25 years," the governor said, adding that youth should participate in sports, and not only concentrate on academics, to be physically fit.

PGR Sindhia, state chief commissioner, Bharat Scouts and Guides, Karnataka, stressed that undivided Dakshina Kannada has a strong connection with Scouts and Guides.

"History shows that hundreds of Scouts and Guides volunteers worked as postmen around 1909. The coastal district is also one of the active and disciplined participants in Scouts and Guides activities. History was made in Moodbidri, also known as Jain Kashi, where an international jamboree with more than 50,000 volunteers, was held for the first time," he said.

Ahmed Alhendawi, secretary general, World Organisation of the Scout Movement, said that Scouts and Guides are not alone, but a part of 70 million volunteers spread across the globe. The jamboree event has become a melting pot, and India has a jamboree celebration every day. "One cannot do everything, but everybody can do something," he stressed. Alhendawi was conferred with the Silver Elephant award for his achievements.

Rajya Sabha MP Veerendra Heggade, added that Moodbidri has become a mini-world. "Volunteers are here to toughen their lives. The jamboree transforms us to be tough," said Heggade, adding that the jamboree is a place which teaches about zero-discrimination.

## Int'l Cultural Jamboree: Students showcase innovative projects

ALVA'S JOURNALISM

### Scouts Learn About Koraga Tribals At Fair

TIMES NEWS NETWORK

Pics: Ravi Posavanike





IGNITED MINDS: Malaysian Scouts and Guides, who are attending the International Cultural Jamboree-2022 at Moodbidri, pose for a picture with buffaloes at the 'Koti-Chennaya' Kambala on Saturday.; Scouts and Guides demonstrate zip line; A scout engaged in an activity; Students at Science Exhibition arranged as part of International Cultural Jamboree-2022 for Scouts and Guides





Mangaluru: The science fair organised as part of the International Cultural Jamboree at Alva's Campus in Moodbidri showcased several unique projects presented by students.

From eco-friendly ways to keep pests away to smart houses, students presented several projects. Huzait Sheikh from Karkala, who presented a smart house, said that he had designed a lamp that lights up only when a person steps forward on stairs. Due to the pressure sensor installed on the stairs, the light turns on. Similarly, Praneet Moras from Belthangady unveiled a dream house, wherein doors get locked based on sound sensors. Mohammad Anas and Nishan Shetty from Moodbidri have devised a novel way of using kitchen waste water for hydroponics.

Taking note of the increasing accidents due to potholes, especially during night hours, students of Canara Engineering College have developed an app that will provide details on the quality of the road.

Meanwhile, scouts, guides, rovers and rangers got an opportunity to look into the life of the tribal community. The lives of members of the Koraga community are associated with the forest and handicrafts. Koraga families source cane and wild creepers from the forest to make items such as rice trays, 'tadape', 'butti' (baskets) and so on. "We have been engaged in weaving baskets and other accessories used in day-to-day life for generations. This has continued even today," said Sundara from Kinnigoli.

Magicians from New Delhi and other places have been entertaining visitors. Magician Wajid Ali said that a team of 22 magicians led by Raj Kumar from Delhi had arrived. "It is a matter of pride that I got the opportunity to participate in the international jamboree," said magician Mohammed Chaman.

Several stamps released by India Post since independence have been displayed. The stamp exhibition relives the pivotal events of our freedom struggle.

## WORLD OF JAMBOREE



Hundreds of students and people visit the ongoing Scouts and Guides International Cultural Jamboree at Moodbidri on Friday. DH PHOTO/FAKRUDDIN H

## Jamboree participants to attend kambala

Kevin.Mendonsa
@timesgroup.com

Pics: TOI





SPIRIT OF ADVENTURE: Scouts and Guides students engage in various activities at the International Cultural Jamboree at the Alva's Campus in Moodbidri on Friday

Mangaluru: The Moodbidri Kambala or Koti Chennaya Jodukere Kambala, will have additional spectators this year, who are the schoolchildren participating in the International Cultural Jamboree-2022, being held at Alva's Education Foundation. According to the organisers, they had planned to take all 60,000 Scouts and Guides participanting in the jamboree to the Kambala, however, the organisers now plan to take a selected number of participants to the kambala, which will begin on Saturday

Mohan Alva, chairman of Alva's Education Foundation, said they have selected about 400 students to watch the kambala, and to learn about it. "We had plans to take a larger number of students to the kambala held at Kadalakere, a few kilometres away from the jamboree premises. However, we received negative feedback, that it would not be feasible to take a large number of them, since the venue cannot accommodate them, and the roads were narrow for buses. Some raised concerns about the safety of the children. Hence, we'll take a selected number of children from non-coastal districts to witness kambala," said Alva, adding that the safety of the children will be paramount.

He added that there was high demand for watching the kambala. "Our institution came up with an idea to create a slushy field on the campus itself, and conduct the kambala. However, it was not possible, due to monetary and other reasons and we dropped the idea," Alva said.

### A belt for women's safety

The International Cultural Jamboree-2022 is providing a platform for many young talents. The science exhibition, or Vigyana Mela, became a platform for four students from Davanagere. The students showcased a belt for women's safety.

The belt created by them, aims to curb atrocities and violence against women. Third-year electronics and communication students of GMIT College, Davanagere, comprising Karthik SR, Darshan GP, Zafar S, and Deepthi, created the battery-operated belt, that can give an electric shock, and is GPS-enabled, for the protection of women.

Whenever a woman is in distress, the belt can be used to shock the attacker with a 5 volt current. The GPS and security technology installed in the belt alerts their kin and the police about their location. "In India, cases of violence against women are increasing. The belt was designed with the idea of using technology for the protection of women. We wish to develop this prototype into a final product," said Karthik.

## Volunteers undertake massive cleaning drive

ALVA'S JOURNALISM

Special Correspondent
MANGALURU



Children participating in a cleanliness drive on eight highways around Moodbidri as part of the International Cultural Jamboree on Thursday. SPECIAL ARRANGEMENT

Various voluntary organisations and students numbering about 5,000 conducted a massive cleaning drive on about 150 km radius of State and National Highways around Moodbidri where the International Scouts and Guides Jamboree is underway.

Nalin Kumar Kateel, Dakshina Kannada MP, launched the campaign, "Namma Samskruthi-Swatchcha Samskruthi," at Vamanjoor Junction on NH 169 that connects Mangaluru with Moodbidri. The MP said there was increased awareness among people in Dakshina Kannada district, because of which the Zilla Panchayat has received cleanliness award at the national level.

Mangaluru Ramakrishna Mutt president Sri Jithakamananda Swami said cleanliness should be the priority to preserve the environment and it should start from home. Cleanliness activity was reverence to Mother Earth that should start with clearing trash.

ZP Chief Executive Officer Kumara said during the five days of the jamboree, over 50,000 students, cadets and volunteers would participate in the cleanliness drive. MLA Umanath K. Kotian, Deputy Commissioner M.R. Ravi Kumar, Mangaluru City Corporation Commissioner Akshy Sridhar, Dakshina Kannada Working Journalists' Association president Srinivas Nayak Indaje and others were present.

As many as eight teams of volunteers undertook the drive at different places around Moodbidri where the International Jamboree was being organised.

While the Netravathi team with 650 volunteers cleaned the flanks of NH 169 from Vamanjoor to Gurupura, the Sharavathi team with 250 Scouts and Guides volunteers and 150 NSS Volunteers from Bhuvanendra College, Karkala, cleaned the flanks of eight roads in Karkala town.

The Shambhavi team with 250 Scouts and Guides and 50 NCC cadets cleaned the flanks of 7 km road stretch from Mulki Karnad Junction to Mulki Railway Station and from Bappanadu Sri Durgaparameshwari Temple to Punaruru. The Yettinahole team with over 800 volunteers cleaned 7.5 km road flanks from Bantwal-Moodbidri Junction to Sornadu Anganwadi.

Payaswini team undertook cleaning in Eadu gram panchayat limits in Hosmar while Swarna River team undertook the drive at Belman, Phalguni team at Gurupura and Nandini team undertook cleaning around Haleyangadi.

RELATED REPORTS
» PAGE 3

JAMBOREE SPECIAL

## Kannada poets come alive through melodious songs

A music concert of great poets and music directors was held




Singers performing at Rangalankara on Saturday | EXPRESS

EXPRESS NEWS SERVICE
@ Mangaluru

RAGALANKARA was used at the Bharat Scouts and Guides International Cultural Jamboree to bring ideologies and life lessons of well-known Kannada poets like Kuvempu, Da Ra Bendre, and Shishunala Sharif to life. It received a breath of fresh air from Rajaratnam's melodic supporting music. Various singers showcased Mysore Ananthaswamy and C Ashwattha's musical abilities. At the K V Subbana Amphitheatre, Shankar Shanbhog and his band performed musical performances that reflected Kannada tradition and cultures in a variety of musical genres. They presented the show called 'Kannada Dindima', a music concert of great Kannada poets and music directors. Their rendition unveiled the uniqueness of Kannada culture in an innovative way.

Shankar Shanbhog, Ravi Moouru, Supriya Raghunandan and Meghana Haliyala, through their melodious voices presented the poems written by prominent poets of Karnataka. Their style of singing was well received by the audience, especially the younger ones. The poems were stylised to set to the music of this time, resulting in it not coming as old fashioned.

Da Ra Bendre's 'Shravana-bantukaadige bantu naadige', sung by Shankar Shanbhog was received with a big round of applause. Another of his renditions of 'Kanada kadalige hambalisede mana' was loved by the younger audience. Ravi Muroor's rendition of 'Ne hinge noodabyada nanna' was well received by the student population. On the audience's insistent request, he sang the piece again. Another of his crowd puller was 'Nannagangiroopa'. He serenaded the audience with a special rendition of 'Helkolakonduru talemayle ondsuru' which they truly loved. Supriya aghunandan's Saint Shishunala Sharif's 'Enthamanjakikudare' and M N Vyasarao's 'Ninnakangalakoladi' were also appreciated by many. The audience bobbed their heads along with the North Karnataka style of Folk songs 'Khirukaddiiyasaree' and 'Sojugada soojimallige' sung by Meghana Haliyala. The vocals were backed up by Deepak and Sangeeta Thomas in keyboards, Raj Gopal in guitar, Virendra Prasad in Mandolin, Lokesh in Kolalu, Padmanabh Kamath in rhythm pad, Bhaskar in dholak and Rajesh Bhagwat in tabla.

### A giant kite adorns the sky at Jamboree

Mangaluru: A huge kite was unveiled as part of the Bharat Scouts and Guides International Cultural Jamboree's art fair at Vidyagiri in Moodbidri on Saturday. The special kite is of 54 ft length and 16 ft width built in the design and concept of artist Dinesh Holla of Team Mangaluru. The culture of Tulunadu such as Bhutaradhana, Kambala, Pilivesha, Nagaradhana, fishing etc is depicted in the kite. Hundreds of cultures of Tulunadu have been depicted one after the other. The choice of colours is unprecedentedly well-matched. Unlike other kites, the huge kite is constructed from umbrella fabric that can be flown once and is called installation art and can be displayed for several years, the team says. Team Mangaluru had earlier set a record by building a 36 ft tall kite. Now, it has beat its own record with a bigger kite. The team took more than two months to prepare the kite. ENS



Giant kite created by Team Mangaluru





Digambarappa Kolamali Sakim Sidnala from Vijayapura lifts a stone weighing 20 kg with his mustache at the Scouts and Guides International Jamboree in Moodbidri on Friday. (Right) Beerappa Logavi from Vijayapura carries a 120 kg sac on his back. DH PHOTOS/ FAKRUDDIN H

## Cultural Jamboree unravels life of Koraga community

MOODBIDRI, DHNS



Koraga family members weave baskets at the Jamboree in Moodbidri.

Bharat Scouts and Guides International Jamboree is showcasing the life of Koraga community.

The lives of the members of tribal community are associated with forest and their handicrafts.

The Koraga families source cane and wild creepers from forest to make accessories, like kudupu (rice tray), tadape and koragajjana butti among others.

All the accessories of Koraga community were on display during the jamboree. Provisions were made to sell accessories made by them.

To give an experience of the forest to students, the forest department had come up with a natural forest concept at the venue. "We have been engaged in weaving baskets and other accessories used in day-to-day life for generations. This has continued even today," Sundara from Kinnigoli said.

"We sell one kudupu for Rs 70. One tadpe is sold for Rs 700. It takes nearly a day for weaving tadpe," said Sumathi, another family member.

Magicians from New Delhi and other places have been enthralling visitors of Jamboree premises.

These magicians are engaged in enthralling the visitors by making pigeon, letters from a book disappear, all of a sudden. Magician Wajid Ali said, "A team of 22 magicians, led by Raj Kumar from Delhi, have arrived. Magic is our livelihood. We are happy to display our art form."

It is a matter of pride that I got an opportunity to participate in the Jamboree. The experience will be remembered till the end of my life, another magician Mohammed Chaman said.

### Special stamps

Most of the stamps, released by India Post since independence, had been displayed on the Krishi Siri premises of Jamboree.

The stamp exhibition relives the important aspects of our freedom struggle, freedom fighters, occasions when special stamps were issued in the country, etc. Over 2,000 stamps in the collection of Sudhakar of Udupi Ambagilu who retired after serving as a postmaster in the postal department, are on display.

"Stamps issued on the national flag on August 15, 1947 and those issued till date are on display. Stamps with the value of one-and-a-half anna, three anna, 12 anna and Rs 10 after Mahatma Gandhi are priceless. There are stamps on when Gandhi was studying as a barrister and his days in South Africa as well," Sudhakar said.

There were stamps on more than 400 freedom fighters.

The stamps on Jalianwala Bagh, Dandi March, Salt Satyagraha, Motilal Nehru, Kamala Nehru, Jamaharlal Nehru, Indira Gandhi, Rajiv Gandhi and Sanjay Gandhi are also on display.

### Entertainment



Playback singer Shankar Mahadevan performing during the 25th International Cultural Jamboree of Scouts and Guides in Moodbidri on Thursday. SPECIAL ARRANGEMENT

## Cadets have a field day

Several adventure activities have been arranged for the scouts, guides, rovers and rangers at the 'challenge valley', as part of the International Cultural Jamboree

Raghava M.
MOODBIDRI



A good number of scouts, guides, rovers, and rangers from across the country took part in different adventure activities at campuses of Alva's Group of Institutions in Moodbidri on Thursday. RAGHAVA M

It's for the first time that Class 6 student S. Vishal Kumar from Kollegal and Mohammed Zayren from Hassan were exposed to adventure activities.

Being short in height, these two guides had difficulty in catching the ladder placed at a height and perform the task of "ladder crossing". The two took help of senior rangers to catch the ladder. Then they did a fine balance with their hands to cross the ladder.

Ladder crossing is among the adventure activities created for scouts, guides, rovers and rangers at the "Challenge valley" created behind Alvas Kannada Medium School, Moodbidri, which is among the venues where activities related to International Cultural Jamboree is being held.

Over 56,000 scouts, guides, rovers and rangers from across the country are taking part in the event, which is on till December 27.

Every day, 8,000 volunteers take part in the activities at challenge valley. Among the activities in the valley include "Derrick Bridge", "Wall climbing, "Monkey Bridge", "Net crawling", "Net climbing", "balancing beam walk", "wide ladder climbing", "drum walk balancing", "tyre balancing walk" and "tree tower climbing". Volunteers have to take part in a minimum of 20 activities at a venue..

There is "Fun Game" area where volunteers exposed to games namely "Ziplining", "Play with nut", "Aiming the point", "Moon walk, "reshuffling cups" and "break the hill".

Among the volunteers who took part in the activities at challenge valley and fun game were Class 10 and 11 students from Rajendra Public School in Sirsa, Haryana. "We are really enjoying the activities here. We are loving this climate, food and the green surroundings," said Class 10 student Nishant.

A large contingent from Himachal Pradesh took were seen taking active part in the activities.

"It took a couple of days for us to get used to this warm climate," said first year B.A. student Nitesh Kashyap hailing from Kangra in Himachal Pradesh. Among the other activities the volunteers are being involved include "Ek Bharath Shreshta Bharat", "Sustainable Development Goals Village", "Skill for life", "Star gazing". The volunteers are also taken to "Magic shows" that is being held across six venues, beach walk, bird watching, puppet show and movie show. They are also taken to book mela, kala mela, food mela and flower mela.

"Each school is allotted the date and time when the volunteers of that school have to be taken to the venues," said High School teacher and Rover Second leader Jagadish Kashimath from Gokak in Belagavi district.

International Cultural Jamboree
Moodubidire
21-27 Dec 2022
The Bharat Scouts and Guides, INDIA

## *Kantaara* runs houseful

ALVA'S JOURNALISM

The Hindu Bureau
MOODBIDRI

Kannada film *Kantaara* ran houseful on the first day of its screening on Thursday at the jamboree. Movie screening is part of the "Cini Mela" activity for the scouts, guides, rovers and rangers. Another Kannada movie *Charlie 777* is also being screened. Hindi movie *Bharajangi Bhaijan* and English movie *Up* are also being screened.



8 ತಂಡಗಳಲ್ಲಿ 5,000 ವಿದ್ಯಾರ್ಥಿಗಳಿಂದ ಅಭಿಯಾನ | ಎನ್‌ಸಿಸಿ, ಎನ್ನೆಸ್ಸೆಸ್, ಸಾರ್ವಜನಿಕರ ಸಹಭಾಗಿತ್ವ

## ಸ್ವಚ್ಛತೆಗಾಗಿ ರಸ್ತೆಗಿಳಿದ ಸ್ಕೌಟ್ಸ್, ಗೈಡ್ಸ್

## ಭೂಮಿ ಸುಂದರವಾಗಿಡಲು ನಿರಂತರ ಕಾಳಜಿ

## ಸಾಂಸ್ಕೃತಿಕ, ಸಾಹಸ, ಕ್ರೀಡಾ ಕಸರತ್ತು ಅನಾವರಣ

## ಸ್ವಚ್ಛ ಪರಿಸರ ನಿರ್ಮಾಣದ ಮೂಲಕ ವಿಶ್ವಮಾನ್ಯತೆ

## ಸುದ್ದಿ ತಂದ ಪತ್ರಿಕಾ ಮಾಧ್ಯಮ

ಸಹಸ್ರಾರು ಸಂಖ್ಯೆಯಲ್ಲಿ ಹರಿದು ಬಂತು ಜನಸಾಗರ ■ ಚಣ್ಣರಿಗೆ ಸಡಗರವೊ ಸಡಗರ

## ಜನ ಜಾತ್ರೆ; ವಿದ್ಯಾರ್ಥಿಗಳ ಶೈಕ್ಷಣಿಕ ಯಾತ್ರೆ

## 'ನಮ್ಮ ಸಂಸ್ಕೃತಿ ಸ್ವಚ್ಛ ಸಂಸ್ಕೃತಿ'ಗೆ ಚಾಲನೆ

ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಪ್ರಯುಕ್ತ ಸ್ವಚ್ಛತಾ ಆಂದೋಲನ

## ಜಾಂಬೂರಿಯಲ್ಲಿ ಜಾದೂ- ಮೋದಿ

## ಉಲ್ಲಾಸದ ಉಯ್ಯಾಲೆಯಲಿ ಪ್ರತಿಭೆಯ ಪ್ರಭೆ

## ಅತಿಥಿ ದೇವೋಭವ

ಆತಿಥ್ಯಕ್ಕೆ ಮನಸೋತ ಮಕ್ಕಳು, ಗಣ್ಯಾತಿಗಣ್ಯರು

## ಕರಾವಳಿಯ 15 ಸಾವಿರ ಪ್ರತಿನಿಧಿಗಳು

# CULTURE FOR YOUTH SOLIDARITY

With its theme 'Culture for Youth Solidarity', Delegates from all over the world and various parts of India arrived at the Swaraj Maidan, Moodbidri, much ahead of the first day, making it one of the biggest registration drives ever witnessed.

Students of Scouts and Guides and Rangers and Rovers have been divided as per their districts and states and have been allotted to different blocks which are monitored by various block heads.

Participants of the International Cultural Jamboree have been provided with a kit of 15 items each which includes water bottles, notepads and various other stationery items.

Arrangements have been made to cater to the nuutritional requirements of participants. About 1000 chefs have been employed to ensure proper meals whjile kitchen and required equiment have also been procured much before the event.

Preparations for meals start at 4 am here at various centres on the Alva's campus. Participants are served with piping meals three times a day in their respective hostels. Everyday five different varieties of desserts are cooked to suit the culinary taste of the participants. GSB, Jain and Brahmin style coastal cuisines are served here.

For the convenience of the masses, the entire event will be live telecasted in the Alva's Education Foundation YouTube channel. The link to the channel will be made available in a form of QR Code and will be pasted in various points throughout the campus. Those who have smart phones can access the live telecast easily.

## ಸಾಂಸ್ಕೃತಿಕ ಪ್ರವಾಸೋದ್ಯಮ ಉತ್ತುಂಗ

700 ಕೋಟಿ ರೂ. ಅಧಿಕ ವ್ಯವಹಾರ | ಜಾಂಬೂರಿ, ಕಂಬಳ, ಕ್ರಿಸ್‌ಮಸ್ ಸಡಗರ

# ಸುದ್ದಿ ತಂದ ಪತ್ರಿಕಾ ಮಾಧ್ಯಮ

## ಜಾಂಬೂರಿಯಲ್ಲಿ ವಿಜ್ಞಾನದ ಮೆರುಗು

### ವಿದ್ಯಾರ್ಥಿಗಳ ಕೌತುಕ ನಿವಾರಿಸಿದ ಮಾದರಿಗಳು

## ವಿದ್ಯಾಗಿರಿಯಲ್ಲಿ ತೆರೆದಿದೆ ಅರಣ್ಯ ಲೋಕ: ಮನುಕುಲದ ಜೀವಾಳ

ಸಾಂಸ್ಕೃತಿಕ ಲೋಕಕ್ಕೆ ವಿಶ್ವಜಾಂಬೂರಿಯ ಬಂಗಾರದ ಕಳಶ

## ಎಲ್ಲೆಲ್ಲೂ ಸಂಗೀತವೇ... ಎಲ್ಲೆಲ್ಲೂ ಸೌಂದರ್ಯವೇ...!

ಸಂತೆಯ ಗೌಜಿ-ಜನಜಾತ್ರೆ

ಉದಯವಾಣಿ UDAYAVANI - MANIPAL ರವಿವಾರ 25-12-2022

## ಮನ ಸೆಳೆದ ಮನೋರಂಜನಾ ಆಟೋಟ!

## ಸಂಸ್ಕೃತಿಯ ವಿನಿಮಯ

## ವಿಶ್ವಜಾಂಬೂರಿಯ ನೆನಪಿಗಾಗಿ ಬೃಹತ್ ಗಾಳಿಪಟ

### ಜಾಂಬೂರಿಗೆ ಇಂದು ಸಿಎಂ

## ಸಾಂಸ್ಕೃತಿಕ ಜಾಂಬೂರಿ ಕಿರೀಟಕ್ಕೆ ರಾಗ ರಂಗೋಲಿ ಗರಿ

■ ವಿಕ ಸುದ್ದಿಲೋಕ ಮೂಡುಬಿದಿರೆ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯ ಕಿರೀಟಕ್ಕೆ ಇನ್ನೊಂದು ಗರಿ ಎಂಬಂತೆ ಶುಕ್ರವಾರ ಸಂಜೆ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಕ್ಯಾಂಪಸ್‌ನ ಪುತ್ತಿಗೆ ಶ್ರೀಮತಿ ವನಜಾಕ್ಷಿ ಕೆ. ಶ್ರೀಪತಿ ಭಟ್ ವೇದಿಕೆಯಲ್ಲಿ ರಾಗ ರಂಗೋಲಿ ಸಂಗೀತ ಕಾರ್ಯಕ್ರಮ ಮೂಡಿಬಂತು.



ನವ ಪರಿಕರಗಳಲ್ಲಿ ಖ್ಯಾತ ಕಲಾವಿದರು ಮೂಡಿಸಿದ ಸಂಗೀತದ ನಾದಕ್ಕೆ ನೆರೆದ 50 ಸಾವಿರಕ್ಕೂ ಅಧಿಕ ಪ್ರೇಕ್ಷಕರು ಮಂತ್ರಮುಗ್ಧರಾಗಿದ್ದರು ಮಾತ್ರವಲ್ಲದೆ, ಹಾವಾಡಿಗನ ಪುಂಗಿಯ ನಾದಕ್ಕೆ ಹಾವು ಹೆಡೆ ಅಲ್ಲಾಡಿಸುವಂತೆ ತಲೆದೂಗಿ ಕಲಾ ವಿದರ ಸೂಚನೆಯಂತೆ ಲಯಬದ್ಧವಾಗಿ ಚಪ್ಪಾಳೆಯ ತಾಳ ಹಾಕಿದರು.

ALVA'S JOURNALISM

ಸಂಗೀತ ಪರಿಕರಗಳ ಸಂಗೀತದ ನಾದವನ್ನು ವೋಕಲ್ (ಮೌಕಿಕ)ನಲ್ಲಿಯೂ ಪ್ರಸ್ತುತಪಡಿಸುವ ಮೂಲಕ ನೆರೆದ ಪ್ರೇಕ್ಷಕರ ತುಂಬು ಹೃದಯದ ಚಪ್ಪಾಳೆ ಗಿಟ್ಟಿಸಿಕೊಂಡರು.

ಕಾರ್ಯಕ್ರಮದ ಆರಂಭದಲ್ಲಿ ಪಂಡಿತ್ ಪ್ರವೀಣ್ ಗೋಡ್ಖಿಂಡಿ ತಾವೇ ರಾಗ ಸಂಯೋಜನೆ ಮಾಡಿದ ಸಂಗೀತವನ್ನು ಬಾನ್ಸುರಿ ರಸದೌತಣ ಮೂಲಕ ಸಂಗೀತಾಸಕ್ತರಿಗೆ ಉಣ ಬಡಿಸಿದರು. ಜಂಬೆಯಲ್ಲಿ ಉಸ್ತಾದ್ ತೌಶಿಕ್ ಖುರೇಶಿ, ಮೆಂಡೋಲಿನ್‌ನಲ್ಲಿ ವಿದ್ವಾನ್ ಯು.ರಾಜೇಶ್, ತಬ್ಲಾದಲ್ಲಿ ಪಂಡಿತ್ ಸತ್ಯಜಿತ್ ತಲ್ವಾಲ್ಕರ್, ಡ್ರಮ್‌ನಲ್ಲಿ ವಿದ್ವಾನ್ ಅರುಣ್ ಕುಮಾರ್, ಖಂಜೀರದಲ್ಲಿ ವಿದ್ವಾನ್ ಸ್ವಾಮಿನಾಥನ್ ಸೆಲ್ವ ಗಣೇಶ್, ಕೀಬೋರ್ಡ್‌ನಲ್ಲಿ ವಿದ್ವಾನ್ ವಿ.ಉಮೇಶ್ ತಮ್ಮ ಕೈಚಳಕ ಪ್ರದರ್ಶಿಸಿದರೆ, ವಿದ್ವಾನ್ ಸಿದ್ಧಾರ್ಥ ಬೆಳ್ಮಣ್ಣು ಗಾಯನದಲ್ಲಿ ಸಹಕರಿಸಿದರು.

**ಮೋಡಿ ಮಾಡಿದ ತನಿಯಾವರ್ತನ:** ಎರಡನೇ ಭಾಗದಲ್ಲಿ ಕಲಾವಿದರು ತನಿಯಾವರ್ತನ ಪ್ರದರ್ಶಿಸಿ, ಸಂಗೀತ ಪ್ರಿಯರ ಮನಸ್ಸಿನ ಮೇಲೆ ತಾಳಗಳ ಮೋಡಿ ಮಾಡಿದರು. ಖಂಜೀರದ ಮೂಲಕ ಸೆಲ್ವ ಗಣೇಶ್ ರೈಲಿನ ನಾದವನ್ನು ಮೂಡಿಸಿದ್ದು ಮಾತ್ರವಲ್ಲದೆ, ಸಾಮಾನ್ಯ ಬೋಗಿ ಹಾಗೂ ಹವಾನಿಯಂತ್ರಿತ ಬೋಗಿಯ ಸದ್ದು ಹೇಗಿರುತ್ತೆ ಅನ್ನೋದನ್ನ ತೋರಿಸಿದರು. ಪ್ರೇಕ್ಷಕರನ್ನು ಜತೆಗೆ ಸೇರಿಸಿ ಕೊನಕೋಲ್ ಹಾಡಿಸಿದರು.

ಉಸ್ತಾದ್ ತೌಶಿಕ್ ಖುರೇಶಿ ಜಂಬೆ ಮಾತ್ರವಲ್ಲದೆ ಬಾಯಿಯಲ್ಲಿಯೂ ಸಂಗೀತದ ನಾದ ಹೊಮ್ಮಿಸಿ ಬಳಿಕ ಎಲ್ಲ ಕಲಾವಿದರು ಒಟ್ಟಾಗಿ ಪ್ರಸ್ತುತಪಡಿಸಿದ ತಾಳ ವಾದ್ಯಗಳ ಸಂಗೀತದ ಮೇಳ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು. ಬಳಿಕ ಆಳ್ವಾಸ್ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ವೈಭವ ಮೂಡಿಬಂತು.

ಮತ್ತಷ್ಟು ದಾಖಲೆ ಬರೆಯುತ್ತಿದೆ ಆಳ್ವಾಸ್‌ನ ಜಾಂಬೂರಿ

## ಜೈನಕಾಶಿಗೆ ಜನವೋ ಜನ!

ಪ್ಯಾಲೇಸ್ ಗ್ರೌಂಡ್‌ನಲ್ಲಿ ರಕ್ಷಣೆ ಪಾಠ ಕಲಿಸಿದ 'ಅಗ್ನಿ ಅವಘಡ'!

ಜಾಂಬೂರಿಯ ಅಂಗಳದಲ್ಲಿ ಕಂಡಿತು 50 ಅಡಿ ಪಟಪಟ ಹಾರೋ ಗಾಳಿಪಟ!

ಮೋಡಿ ಮಾಡುವ ಜಾದೂ ಕಂಡು ಬೆರಗಾದ ಸ್ಕೌಟ್ ಗೈಡ್ಸ್‌ನ ಮಕ್ಕಳು!

ಪ್ಲಾಸ್ಟಿಕ್ ಕಚ್ಚಾ ವಸ್ತು ಬಳಸಿ ರೆಡಿ ಮಾಡಿದ್ರು ಕೀ ಚೈನ್!

# ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ: ಶಿಲ್ಪಕಲಾ ಶಿಬಿರಕ್ಕೆ ಚಾಲನೆ

**ಮೂಡುಬಿದಿರೆ:** ಡಿ.21ರಿಂದ 27ರವರೆಗೆ ಆಳ್ವಾಸ್ ಕಾಲೇಜಿನ ಆವರಣದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ನಿಮಿತ್ತ ಆಯೋಜಿಸಿರುವ ಕಲಾ ಮೇಳದ ಒಂದು ಭಾಗವಾದ ಶಿಲ್ಪಕಲಾ ಶಿಬಿರದ ಉದ್ಘಾಟನಾ ಕಾರ್ಯಕ್ರಮ ನಡೆಯಿತು.




ಕಾರ್ಯಕ್ರಮದಲ್ಲಿ ಅತಿಥಿಯಾಗಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಮೆನೇಜ್‌ಮೆಂಟ್ ಟ್ರಸ್ಟಿ ವಿವೇಕ್ ಆಳ್ವ, ಅಂತಾರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ಜಾಂಬೂರಿ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆಯುತ್ತಿರುವುದು ಹೆಮ್ಮೆಯ ಸಂಗತಿ, ಜಾಂಬೂರಿಯಲ್ಲಿ ದೇಶದ ಅನೇಕ ಸಂಸ್ಕೃತಿಗಳನ್ನು ಜನರಿಗೆ ಪರಿಚಯಿಸುವ ಸಲುವಾಗಿ ಕೃಷಿಮೇಳ, ವಿಜ್ಞಾನ ಮೇಳ, ಆಹಾರ ಮೇಳ ಮುಂತಾದ ಅನೇಕ ಮೇಳಗಳನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳು ಕಲೆಯ ಬಗ್ಗೆ ಹೆಚ್ಚಿನ ಆಸಕ್ತಿ ತೋರಿದಾಗ ಅವರ ಮನೋವಿಕಸನದ ಜತೆಗೆ ಚಿಂತನೆಯಲ್ಲಿ ವ್ಯಾಪಕ ಬದಲಾವಣೆಗಳನ್ನು ಕಾಣಬಹುದು. ಪ್ರತಿನಿತ್ಯ ಪಾಠ ಪ್ರವಚನಗಳಲ್ಲಿ ಮಗ್ನರಾಗಿರುವ ವಿದ್ಯಾರ್ಥಿಗಳಿಗೆ ಕಲಾವಿದರ ಕೈ ಚಳಕದಿಂದ ಮೂಡಿದ ವಿವಿಧ ಕಲಾಕೃತಿಗಳು ಮನಸ್ಸಿಗೆ ಮುದ ನೀಡುವುದರ ಜೊತೆಗೆ ಮಾಹಿತಿ ನೀಡುತ್ತದೆ ಎಂದರು.

ಹಿರಿಯ ಕಲಾವಿದ ಎಮ್. ರಾಮ ಮೂರ್ತಿ ಕಾರ್ಯಕ್ರಮ ಉದ್ಘಾಟಿಸಿದರು. ಚಿತ್ರ ಕಲಾವಿದ ಹಾಗೂ ಫೈಬರ್ ಕ್ಲೇ ಮಾಡೆಲ್ ನಿಪುಣ ಪುರುಷೋತ್ತಮ ಅಡ್ವೆ ಪ್ರಸಾದ್ ಆರ್ಟ್ ಗ್ಯಾಲರಿಯ ಕೋಟಿ ಪ್ರಸಾದ್ ಆಳ್ವ ಮತ್ತಿತರರಿದ್ದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗಣೇಶ ಸೋಮಯಾಜಿ ಸ್ವಾಗತಿಸಿ, ಅಯನಾ ರಮಣ್ ನಿರೂಪಿಸಿದರು.

## ಶಂಕರ್ ಮಹದೇವನ್ ಸಂಗೀತ ರಸಸಂಜೆ

ತಲೆದೂಗಿದ ಸಹಸ್ರಾರು ಮನಸ್ಸುಗಳು

## ಮಂಜುನಾದ ಭಕ್ತಿಭಾವ ಸ್ವರನಿನಾದ

## ರಾಗಭಾವಗಳ ವಿನೂತನ ಆಲಾಪ

## ಹಣ್ಣುಗಳ ಮೇಲೆ ಖ್ಯಾತನಾಮರ ಚಿತ್ರ

## ಜಾಕ್ ಅನಿಲ್ ಹಲಸು ದರ್ಬಾರ್

## ತಂತ್ರಜ್ಞಾನಿಯಳಿಗೆ ನಿರಾ ಫೈಲ್ಪೋಟಿ

## ಸಸಿಹಿತ್ಲು ಕಡಲ ಕಿನಾರೆಯಲ್ಲಿ ವಿದ್ಯಾರ್ಥಿಗಳ ಸಂಭ್ರಮ

ಮೂಡುಬಿದಿರೆ ಆಸುಪಾಸಿನ 8 ಪ್ರಮುಖ ರಸ್ತೆ ಬದಿಗಳಲ್ಲಿ ದಾಖಲೆ ಬರೆಯಲಿದೆ ಬೃಹತ್ ಸ್ವಚ್ಛತಾ ಅಭಿಯಾನ

## ಈ ಬಾರಿ 'ಜಾಂಬೂರಿ'ಗೆ ಸ್ವಚ್ಛತೆಯ ಮೆರುಗು!

ಅಭಿಯಾನ ಯಶಸ್ವಿಗೊಳಿಸಬೇಕು

ಜನತೆಯಲ್ಲಿ ಅರಿವು ಮೂಡಿಸುವ ಕಾರ್ಯ

ದಿನಗಣನೆ | ವಿಜ್ಞಾನ ಮೇಳದಲ್ಲಿ ಒಟ್ಟು 11 ವಿವಿಧ ವಿಭಾಗ

# ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ- ವಿಜ್ಞಾನ ಮೇಳ

• ಕನ್ನಡಪ್ರಭ ವಾರ್ತೆ ಮೂಡುಬಿದಿರೆ

ಭಾರತ್ ಸ್ಕೌಟ್-ಗೈಡ್ಸ್ ವತಿಯಿಂದ ನಡೆಯುವ ಸಾಂಸ್ಕೃತಿಕ ಜಾಂಬೂರಿಗೆ ವಿದ್ಯಾಗಿರಿಯಲ್ಲಿ ಕ್ಷಣಗಣನೆ ಆರಂಭವಾಗಿದೆ.

ಮೂಡುಬಿದಿರೆ ಸಾಂಸ್ಕೃತಿಕ ಜಾಂಬೂರಿಗೆ ದಿನಗಣನೆ

ಇಲ್ಲಿ ಒಟ್ಟು 5 ವಿವಿಧ ಮೇಳಗಳಿದ್ದು, ಪ್ರಪಂಚದಲ್ಲಿ ವಿಜ್ಞಾನ ಕ್ಷೇತ್ರದ ಜ್ಞಾನ ಸಂಪತ್ತಿನ ಪ್ರದರ್ಶನವು ಇಲ್ಲಿ ಆಗಲಿದೆ.

ಜಾಂಬೂರಿಯಲ್ಲಿ ಭಾಗವಹಿಸುವ ಎಲ್ಲ ಸ್ಕೌಟ್ - ಗೈಡ್ ವಿದ್ಯಾರ್ಥಿಗಳಿಗೆ ಪೋಷಕರಿಗೆ ವಿಜ್ಞಾನದ ಲೋಕವನ್ನು ಪರಿಚಯಿಸುವ, ವೈಜ್ಞಾನಿಕ ಚಿಂತನೆಯನ್ನು ಬೆಳೆಸಲು, ವೈಜ್ಞಾನಿಕ ಆವಿಷ್ಕಾರಗಳ ಹೊಳಹು ನೀಡಲು ಹಾಗೂ ವೈಜ್ಞಾನಿಕ ಶಿಕ್ಷಣ ಮತ್ತು ಸಮುದಾಯದ ಬಹುಮುಖಿ ಬೆಳವಣಿಗೆಗೆ ವಿಜ್ಞಾನವನ್ನು ಉಪಯೋಗಿಸುವ ಸಾಧ್ಯತೆಗಳನ್ನೂ ಪ್ರಸ್ತುತ ಪಡಿಸುವ ಉದ್ದೇಶದೊಂದಿಗೆ ಬೃಹತ್ ವಿಜ್ಞಾನ ಮೇಳವನ್ನು ಆಯೋಜಿಸಲಾಗಿದೆ. ಈ ವಿಜ್ಞಾನ ಮೇಳದಲ್ಲಿ ಒಟ್ಟು 11 ವಿವಿಧ ವಿಭಾಗಗಳಿದ್ದು, ಪ್ರತೀ ವಿಭಾಗವು ಕಲಿಕೆಯ ಅಸಾಮಾನ್ಯ ಸಾಧ್ಯತೆಗಳನ್ನೂ ತೆರೆದಿಡುತ್ತದೆ.



**ವಿಜ್ಞಾನ ಮೇಳದಲ್ಲಿ ಏನಿರಲಿದೆ ?**

1. ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ವಿದ್ಯಾರ್ಥಿಗಳ ವಿಜ್ಞಾನ ಪ್ರಾತ್ಯಕ್ಷಿಕೆಗಳ ವಿಭಾಗ.
2. ಕಾಲೇಜು ವಿದ್ಯಾರ್ಥಿಗಳ ಆವಿಷ್ಕಾರಗಳ ಪ್ರಾತ್ಯಕ್ಷಿಕೆ ಮತ್ತು ಸ್ಪರ್ಧಾ ವಿಭಾಗ.
3. ಇಂಜಿನಿಯರಿಂಗ್ ವಿದ್ಯಾರ್ಥಿಗಳ ಆವಿಷ್ಕಾರಗಳ ಪ್ರಾತ್ಯಕ್ಷಿಕೆ.
4. ವೈದ್ಯ ವಿಜ್ಞಾನ ಮತ್ತು ವಿವಿಧ ವೈದ್ಯಕೀಯ ಸಲಕರಣೆಗಳು ಹಾಗು ವೈದ್ಯಕೀಯ ಉಪಕ್ರಮಗಳ ಪ್ರಾತ್ಯಕ್ಷಿಕೆ.
5. ವಿವಿಧ ಕೈಗಾರಿಕಾ ಯಂತ್ರೋಪಕರಣಗಳ ಪ್ರಾತ್ಯಕ್ಷಿಕೆ.
6. ರಾಷ್ಟ್ರೀಯ ಮಟ್ಟದ ವಿಜ್ಞಾನ ಸಂಶೋಧನಾ ಕೇಂದ್ರಗಳ ಆವಿಷ್ಕಾರಗಳ ಪರಿಚಯಾತ್ಮಕ ಪ್ರಾತ್ಯಕ್ಷಿಕೆ.
7. ವಿವಿಧ ವೈಜ್ಞಾನಿಕ ಶಿಕ್ಷಣ ಕೇಂದ್ರಗಳಿಗೆ ತಂಡಗಳಾಗಿ ಭೇಟಿ ನೀಡುವ ಕಾರ್ಯಕ್ರಮ.
8. ವಿವಿಧ ವೈಜ್ಞಾನಿಕ ಕ್ಲಬ್ ಗಳ ಆಕರ್ಷಕ ಪ್ರಾತ್ಯಕ್ಷಿಕೆಗಳು.

**ವಿಜ್ಞಾನ ಮೇಳದ ವಿಶೇಷತೆ**

ದಿನ ನಿತ್ಯವೂ ವಿಜ್ಞಾನಿಗಳ ಮಾತುಗಳನ್ನು ಕೇಳುವುದರ ಜೊತೆಗೆ ಸಂವಾದಕ್ಕೂ ಅವಕಾಶವಿರುತ್ತದೆ. ವಿಜ್ಞಾನ ಮೇಳದಲ್ಲಿ ಇಸ್ರೋ, ಐಐಎಸ್ಸಿ, ಡಿಆರ್‌ಡಿಒ, ಸಿತಾರ್ ಇತ್ಯಾದಿ ಸಂಸ್ಥೆಗಳಿಂದ ವಿಜ್ಞಾನಿಗಳು ಆಗಮಿಸಲಿದ್ದು, ಅವರ ವೈಜ್ಞಾನಿಕ ಉಪಕರಣಗಳನ್ನು ಪ್ರದರ್ಶಿಸಲಾಗುವುದು. ಸಿಪಿಸಿಆರ್‌ಐ, ಕೃಷಿ ಸಂಶೋಧನಾ ಕೇಂದ್ರಗಳು ಭಾಗವಹಿಸಲಿದ್ದಾರೆ.

9. ವಿವಿಧ ಸರ್ಕಾರಿ ಇಲಾಖೆಗಳ ಯೋಜನೆ ಮತ್ತು ವೈಜ್ಞಾನಿಕ ತಂತ್ರಗಾರಿಕೆಗಳ ಪ್ರದರ್ಶನ.
10. ದೇಶದ ವಿವಿಧ ಸಾಂಪ್ರದಾಯಿಕ ಹಾಗೂ ವೈಜ್ಞಾನಿಕ ಆಟಿಕೆಗಳ ಪ್ರದರ್ಶನ.
11. ಗಣಕ ವಿಜ್ಞಾನ ಆಧಾರಿತ ಐಡಿಯಾಥಾನ್ ಹಾಕಥಾನ್‌ಗಳು.

ಸ್ಪರ್ಧಾ ವಿಭಾಗದಲ್ಲಿ ಭಾಗವಹಿಸುವ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ವಿದ್ಯಾರ್ಥಿಗಳಿಗೆ ಆಕರ್ಷಕ ಬಹುಮಾನದ ಜೊತೆಗೆ ಭಾಗವಹಿಸಿದ ಪ್ರತಿಯೊಬ್ಬರಿಗೂ ಪ್ರಮಾಣಪತ್ರ ನೀಡಲಾಗುತ್ತದೆ. ಆಳ್ವಾಸ್ ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಿಂದ ಹಾಗೂ ರಾಜ್ಯದ ವಿವಿಧ ಇಂಜಿನಿಯರಿಂಗ್ ಕಾಲೇಜಿನ ವತಿಯಿಂದ ವಸ್ತು ಪ್ರದರ್ಶನ ನಡೆಯಲಿದೆ.

ದಿನಕ್ಕೆ 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು, ಜನರಿಗೆ ವಿಜ್ಞಾನ ಪ್ರದರ್ಶನ ನಡೆಯುತ್ತಿದ್ದು, ಒಟ್ಟು ಏಳು ದಿನಗಳಲ್ಲಿ ಸರಿ ಸುಮಾರು 1 ಲಕ್ಷಕ್ಕೂ ಅಧಿಕ ಜನ ವಿಜ್ಞಾನ ಮೇಳದ ಲಾಭವನ್ನು ಪಡೆಯಬಹುದು.

ದೇಶದ ವಿವಿಧ ಸಾಂಪ್ರದಾಯಿಕ ಹಾಗೂ ವೈಜ್ಞಾನಿಕ ಆಟಿಕೆಗಳ ಪ್ರದರ್ಶನ ಮತ್ತು ಮಾರಾಟ ಇರಲಿವೆ. ಆಸಕ್ತರು ವೈಜ್ಞಾನಿಕ ಆಟಿಕೆಗಳನ್ನು ಖರೀದಿಸಬಹುದು. ಕೋಲ್ಕತ್ತಾ, ರಾಜಸ್ಥಾನ, ದೆಹಲಿ, ಗುಜರಾತ್, ತಮಿಳುನಾಡು, ಚೆನ್ನಪಟ್ಟಣ ಹೀಗೆ ಬೇರೆ ಬೇರೆ ರಾಜ್ಯಗಳಿಂದ ಆಗಮಿಸಲಿದ್ದಾರೆ. ಒಟ್ಟು ಏಳು ದಿನಗಳ ಕಾರ್ಯಕ್ರಮದಲ್ಲಿ ವಿಜ್ಞಾನ ಮೇಳದಲ್ಲಿ ವಸ್ತು ಪ್ರದರ್ಶನದಿಂದ ಹಿಡಿದು ಆವಿಷ್ಕಾರ, ಚಮತ್ಕಾರ, ಜ್ಞಾನ ಸಂಪತ್ತಿನ ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಇದರ ಸದುಪಯೋಗ ಪಡೆಯಬಹುದು.

ಈ ಎಲ್ಲ ವಿಭಾಗಗಳ ಪ್ರದರ್ಶನ, ಮೇಳ ಏಳೂ ದಿನಗಳ ಕಾಲ ವಿದ್ಯಾಗಿರಿಯ ಆಳ್ವಾಸ್ ಪದವಿಪೂರ್ವ ಕಾಲೇಜಿನ ಮುಖ್ಯಕಟ್ಟಡದ 1,2,3 4 ಮತ್ತು 5ನೇ ಮಹಡಿಯಲ್ಲಿ ಆಯೋಜನೆಗೊಳ್ಳಲಿದ್ದು, ಶಿಬಿರದಲ್ಲಿ ಭಾಗವಹಿಸುವಲು ಆಸಕ್ತ ವಿದ್ಯಾರ್ಥಿಗಳಿಗೂ, ಸಾರ್ವಜನಿಕರಿಗೂ ವೀಕ್ಷಿಸುವ ಜೊತೆಗೆ ಊಟೋಪಚಾರದ ವ್ಯವಸ್ಥೆ ಇರುತ್ತದೆ.




# ಜಿಲ್ಲಾ ವಾರ್ತೆಗಳು

## ಬೆಳಗಾವಿ

ಜನವರಿ 19, 2023 ರಂದು ನಿಪ್ಪಾಣಿ ತಾಲ್ಲೂಕು ಸದಲಗಾ ಪಟ್ಟಣದಲ್ಲಿ ಶ್ರೀ ಎ.ಪಿ.ಜೆ. ಅಬ್ದುಲ್ ಕಲಾಂ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ವತಿಯಿಂದ "ಸದಲಗಾ ಹಬ್ಬ" "ಕನ್ನಡ ಹಬ್ಬ" ಹಾಗೂ "ಸ್ಕೌಟ್-ಗೈಡ್ ಮಿನಿ ಜಾಂಬೂರಿ" ಕಾರ್ಯಕ್ರಮವು ಜರುಗಿತು. ಕಾರ್ಯಕ್ರಮಕ್ಕೆ ಚಿಂಚಣಿಯ ಪರಮಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮೀಜಿಗಳು ಹಾಗೂ ಅಪರ ಆಯುಕ್ತರ ಕಾರ್ಯಾಲಯ ಧಾರವಾಡದ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ತಬಲಕ್ಕನವರ, ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳಾದ ಶ್ರೀ ಎಸ್.ಬಿ. ಜೋಗಳೆ ಇವರು ಪಥಸಂಚಲನೆಗೆ ಚಾಲನೆ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲೂಕಿನಿಂದ 500ಕ್ಕೂ ಹೆಚ್ಚು ಸ್ಕೌಟ್-ಗೈಡ್ ಮಕ್ಕಳು ಹಾಗೂ ಸ್ಕೌಟರ್-ಗೈಡರ್‌ಗಳು ಭಾಗವಹಿಸಿದ್ದರು. ಅಲ್ಲಮಪ್ರಭು ಸ್ವಾಮೀಜಿಗಳು ಮಾತನಾಡುತ್ತಾ ಈ ಕಾರ್ಯಕ್ರಮವು ಸರ್ವಧರ್ಮ ಸಮನ್ವಯತೆ ಎಂಬುದನ್ನು ತೋರಿಸಿತು ಎಂದು ಹೇಳಿದರು. ಸಂಘದ ಅಧ್ಯಕ್ಷರಾದ ಶ್ರೀ ಅಜರುದ್ದೀನ ಶೇಖ ಎಲ್ಲರನ್ನೂ ಸ್ವಾಗತಿಸಿದರು ವಂದಿಸಿದರು.



* ಜನವರಿ 15, 2023 ರಂದು ಬೆಳಗಾವಿ ಸುವರ್ಣ ವಿಧಾನ ಸೌಧದ ಆವರಣದಲ್ಲಿ ಯೋಗಾಥಾನ್ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಶ್ರೀ ನಿತೇಶ ಕೆ. ಪಾಟೀಲ, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಶ್ರೀ ಅಶೋಕ ದುಡಗುಂಟಿ, ಉಪನಿರ್ದೇಶಕರು ಆಡಳಿತ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬೆಳಗಾವಿ ಶ್ರೀ ಬಸವರಾಜ ನಲತವಾಡ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಬೆಳಗಾವಿ ನಗರ ವಲಯ ಶ್ರೀ ವೈ. ಜೆ. ಭಜಂತ್ರಿ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಬೆಳಗಾವಿ ಜಿಲ್ಲಾ



ಸಂಸ್ಥೆಯ ವತಿಯಿಂದ 150 ರೋವರ್-ರೇಂಜರ್‌ಗಳು ಸೇವಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

* ಜನವರಿ 01, 2023 ರಂದು 74 ಗಣರಾಜ್ಯೋತ್ಸವದ ಅಂಗವಾಗಿ ಚಿಕ್ಕೋಡಿ ನಗರದ ಆರ್. ಡಿ. ಪ್ರೌಢ ಶಾಲೆಯ ಮೈದಾನದಲ್ಲಿ ನಡೆದ ಸಾಮೂಹಿಕ ಪಥಸಂಚಲನದಲ್ಲಿ ನಗರದ ಶಾಸಕರ ಕ್ಷೇತ್ರದ ಮಾದರಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಲ್ಪನಾ ಚಾವ್ಲಾ ಗೈಡ್ ತಂಡವು ಪ್ರಥಮ ಸ್ಥಾನ ಪಡೆದುಕೊಂಡು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗೆ ಹಾಗೂ ಜಿಲ್ಲಾ ಸಂಸ್ಥೆ ಬೆಳಗಾವಿಗೆ ಕೀರ್ತಿ ತಂದಿದೆ. ಪ್ರಥಮ ಸ್ಥಾನ ಪಡೆದ ತಂಡಕ್ಕೆ ಮಾನ್ಯ ಶಾಸಕರಾದ ಸನ್ಮಾನ್ಯ ಶ್ರೀ ಗಣೇಶ ಪ್ರಕಾಶ ಹುಕ್ಕೇರಿ, ಮಾಜಿ ಸಂಸದ ಸನ್ಮಾನ್ಯ ಶ್ರೀ ಪ್ರಕಾಶ ಹುಕ್ಕೇರಿ, ಪೋಲೀಸ್ ಅಧೀಕ್ಷಕರು ಶ್ರೀ ಮಾಧವ ಗಿತ್ತೇ, ತಹಶಿಲ್ದಾರ ಶ್ರೀ ಸಿ. ಎಸ್. ಕುಲಕರ್ಣಿ, ಉಪನಿರ್ದೇಶಕರು (ಆ), ಶ್ರೀ ಮೋಹನ ಕುಮಾರ ಹಂಚಾಟೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಪ್ರಕಾಶ. ಹಿರೇಮಠ ಇವರುಗಳ ಉಪಸ್ಥಿತಿಯಲ್ಲಿ ಬಹುಮಾನ ವಿತರಿಸಲಾಯಿತು. ಪಥಸಂಚಲನ ತಯಾರಿಗೆ ಶಾಲೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ಶೈಲಶ್ರೀ. ಜೋಶಿ ಶ್ರಮವಹಿಸಿದ್ದಾರೆ. ಪ್ರಧಾನ ಗುರುಮಾತೆ. ಶ್ರೀಮತಿ ಜಂಬಗಿ, ದೈಹಿಕ ಶಿಕ್ಷಣ ಶಿಕ್ಷಣ ಶಿಕ್ಷಕಿ ಶ್ರೀಮತಿ ಕಲ್ಯಾಣಿ ಇವರು ಸಹಕರಿಸಿದ್ದಾರೆ. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಎನ್. ಜಿ. ಪಾಟೀಲ ಉಪಸ್ಥಿತರಿದ್ದರು. ಪ್ರಶಸ್ತಿ ಪಡೆದ ತಂಡವನ್ನು ಜಿಲ್ಲಾ ಸಂಸ್ಥೆಯ ಎಲ್ಲ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.



## ಬೆಂಗಳೂರು ದಕ್ಷಿಣ

ಡಿಸೆಂಬರ್ 19, 2022 ರಂದು ಎಸ್.ಎಲ್.ಎನ್. ಕಲಾ ಮತ್ತು ವಾಣಿಜ್ಯ ಕಾಲೇಜಿನ ಜನೋಪಕಾರಿ ಶ್ರೀ ದೊಡ್ಡಣ್ಣ ಶೆಟ್ಟಿ ದಳದ ವತಿಯಿಂದ ರೋವರ್ಸ್-ರೇಂಜರ್ಸ್‌ಗಳಿಗೆ ದೀಕ್ಷಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಸಮಾರಂಭದಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಕಾರ್ಯದರ್ಶಿಗಳು ಆದ ಶ್ರೀ ಮಲ್ಲಿಕಾರ್ಜುನವರು ಮತ್ತು ಕಾಲೇಜಿನ ಪ್ರಾಂಶುಪಾಲರಾದ ಡಾ. ಪವನಕುಮಾರ್‌ರವರು 18 ರೋವರ್ಸ್-ರೇಂಜರ್ಸ್‌ಗಳು ಉಪಸ್ಥಿತರಿದ್ದರು.



* ಡಿಸೆಂಬರ್ 3 ಮತ್ತು 4, 2022 ಕ್ಯಾಥಡ್ರೆಲ್ ಶಾಲೆಯಲ್ಲಿ ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದಲ್ಲಿ 115 ಸ್ಕೌಟ್ಸ್, 117 ಗೈಡ್ಸ್ ಒಟ್ಟು 232 ಮಕ್ಕಳು ಮತ್ತು 15 ಶಿಕ್ಷಕರು ಭಾಗವಹಿಸಿದರು.



* ಬೆಂಗಳೂರು ದಕ್ಷಿಣ ಜಿಲ್ಲೆಯ ಎಲ್ಲಾ ಸ್ಥಳೀಯ ಮತ್ತು ದಳ ಮಟ್ಟದಲ್ಲಿ ಜನವರಿ 11, 2023 ರಂದು ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು.



## ಬೆಂಗಳೂರು ಉತ್ತರ

ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ 6ನೇ ತಿಂಗಳ "ಸ್ಕೌಟ್ಸ್ ನಡಿಗೆ ಹಳ್ಳಿ ಕಡೆಗೆ" ಸಮುದಾಯ ಸೇವೆ ಪ್ರಯುಕ್ತ ಡಿಸೆಂಬರ್ 31, 2022 ರಂದು ಗಂಟಿಗಾನ ಹಳ್ಳಿಯಲ್ಲಿ ಸ್ವಚ್ಛತಾ ಶಿಬಿರ ಮಾಡಲಾಯಿತು.



* ಯಲಹಂಕ ಸ್ಥಳೀಯ ಸಂಸ್ಥೆ ವತಿಯಿಂದ ಸ್ಕೌಟ್ಸ್-ಗೈಡ್ಸ್‌ಗಳು ವಿಧಾನಸೌಧಕ್ಕೆ ಬೇಟಿ ನೀಡಿ ಅಲ್ಲಿ ನಡೆಯುವ ವಿಚಾರವನ್ನು ತಿಳಿದುಕೊಂಡರು.

* ಜನವರಿ 12, 2023 ರಂದು ಶ್ರೀ ಎಸ್. ಕಡಂಬಿ ವಿದ್ಯಾ ಕೇಂದ್ರ ಸ್ಕೂಲ್ ರಾಜಾಜಿನಗರ ಈ ಶಾಲೆಯ ಸ್ಕೌಟ್ಸ್-ಗೈಡ್ಸ್ ವತಿಯಿಂದ ವಿವೇಕಾನಂದರ ಜನ್ಮ ದಿನದ ಅಂಗವಾಗಿ ಸ್ಕೌಟ್ಸ್ ವಿದ್ಯಾರ್ಥಿಗಳು ವಿವೇಕಾನಂದರ ವೇಷ ಧರಿಸಿ, ಜಾಥಾ ನಡೆಸಿ ವಿವೇಕಾನಂದರ ಚಿಂತನೆ ಹಾಗೂ ಅವರ ಆದರ್ಶದ ಬಗ್ಗೆ ಜನಜಾಗೃತಿ ಮೂಡಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಪ್ರಾಂಶುಪಾಲರಾದ ಶ್ರೀಮತಿ ರೋಹಿಣೀ ಗೋಪಾಲ್‌ರವರು ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ಕೌಟ್ಸ್-ಗೈಡ್ಸ್‌ಗಳಿಗೆ ಪ್ರೋತ್ಸಾಹಿಸಿದರು. ಹಿಮಾಂಶು ಕಲಾ ಪೀಠ ಮಲ್ಲೇಶ್ವರಂ ಈ ಶಾಲೆಯ ಸ್ಕೌಟ್ಸ್-ಗೈಡ್ಸ್ ವತಿಯಿಂದ ವಿವೇಕಾನಂದರ ಜನ್ಮ ದಿನದ ಅಂಗವಾಗಿ ಸ್ಕೌಟ್ಸ್ ವಿದ್ಯಾರ್ಥಿಗಳು ವಿವೇಕಾನಂದರ ವೇಷ ಧರಿಸಿ ಅವರ ಅದರ್ಶ ಹಾಗೂ ಚಿಂತನೆಯ ಮಾಹಿತಿ ನೀಡಿದರು. ಗೈಡ್ಸ್ ಶಿಕ್ಷಕಿ ಶ್ರೀಮತಿ ಸವಿತ ಇವರು ಕಾರ್ಯಕ್ರಮ ಸಂಘಟಿಸಿದರು.

* ಬಾಣಸವಾಡಿ ಸ್ಥಳೀಯ ಸಂಸ್ಥೆ ವತಿಯಿಂದ ಮಾರುತಿ ವಿದ್ಯಾಲಯ ಸಮೂಹ ಸಂಸ್ಥೆಯಲ್ಲಿ ರಾಷ್ಟ್ರೀಯ ಯುವ ದಿನಾಚರಣೆ ನಡೆಸಲಾಯಿತು. ಸ್ಕೌಟ್ಸ್-ಗೈಡ್ಸ್ ವತಿಯಿಂದ ವಿವೇಕಾನಂದರ ಜನ್ಮ ದಿನದ ಅಂಗವಾಗಿ ಸ್ಕೌಟ್ಸ್ ವಿದ್ಯಾರ್ಥಿಗಳು ವಿವೇಕಾನಂದರ ವೇಷ ಧರಿಸಿ, ಜಾಥಾ ನಡೆಸಿ ವಿವೇಕಾನಂದರ ಚಿಂತನೆ ಹಾಗೂ ಅವರ ಆದರ್ಶದ ಬಗ್ಗೆ ಜನಜಾಗೃತಿ ಮೂಡುಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ವರ್ಧಮಾನ್ ಇವರು ಕಾರ್ಯಕ್ರಮ ಸಂಘಟಿಸಿದರು.



* ಮಲ್ಲೇಶ್ವರಂ ಸ್ಥಳೀಯ ಸಂಸ್ಥೆಯ ಸ್ವೆಲ್ಲಾ ಮೇರಿಸ್ ಶಿಕ್ಷಣ ಸಂಸ್ಥೆಯಲ್ಲಿ ವಿವೇಕಾನಂದರ ಜನ್ಮ ದಿನದ ಅಂಗವಾಗಿ ಅವರ ಭಾವಚಿತ್ರಕ್ಕೆ ಹೂಹಾರ ಹಾಕಿ ವಿವೇಕಾನಂದರ ಜೀವನ ಚರಿತ್ರೆ ಹಾಗೂ ಅವರ ಆದರ್ಶದ ಬಗ್ಗೆ ಮಾಹಿತಿ ನೀಡಲಾಯಿತು. ಮುಖ್ಯ ಶಿಕ್ಷಕಿಯಾದ ಸಿಸ್ಟರ್ ಒಪೀಲಾ ಇವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶುಭ ಹಾರೈಸಿರು. ಕಾರ್ಯಕ್ರಮವನ್ನು ಗೈಡ್ಸ್ ಶಿಕ್ಷಕಿಯರು ಹಾಗೂ ಫ್ಲಾಕ್ ಶಿಕ್ಷಕರು ಸಂಘಟಿಸಿದರು.

* ವಾಣಿ ವಿದ್ಯಾಕೇಂದ್ರ ಮಾಗಡಿ ಇಲ್ಲಿ ಡಿಸೆಂಬರ್ 05, 2022 ರಂದು ಸ್ಕೌಟ್ಸ್-ಗೈಡ್ಸ್ ವತಿಯಿಂದ ಸ್ಕೌಟಿಂಗ್ ಕೌಶಲ್ಯದ ವಿಷಯದ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸೇನಾ ಅಧಿಕಾರಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸ್ಕೌಟ್ಸ್-ಗೈಡ್ಸ್ ಕೌಶಲ್ಯದ ಬಗ್ಗೆ ಪ್ರಶಂಸಿದರು. ಶಾಲಾ ಪ್ರಾಂಶುಪಾಲರು ಶ್ರೀ ಕೆ.ಅರ್. ವಿಶ್ವನಾಥ್ ಕಾರ್ಯಕ್ರಮಕ್ಕೆ ಶುಭಾಶಯ ಕೋರಿದರು. ಶ್ರೀ ಯೋಗಿಶ್ ಸ್ಕೌಟ್ಸ್ ಶಿಕ್ಷಕರು ಹಾಗೂ ರಾಜಾಜಿನಗರ ಸ್ಥಳೀಯ ಸಂಸ್ಥೆ ಕರ್ಯದರ್ಶಿ ಕಾರ್ಯಕ್ರಮ ಸಂಘಟಿಸಿದರು.

* ಚಾಮುಂಡಿ ಮುಕ್ತದಳ, ಮಲ್ಲೇಶ್ವರಂನಲ್ಲಿ ರಾಷ್ಟ್ರೀಯ ಯುವ ದಿನದ ಪ್ರಯುಕ್ತ ವಿವೇಕಾನಂದರ ಜನ್ಮ ದಿನಾಚರಣೆ ಮಾಡಲಾಯಿತು. ಮುಕ್ತದಳದ ನಾಯಕರಾದ ಶ್ರೀ ನರಸಿಂಹಮೂರ್ತಿ ಹಾಗೂ ಶ್ರೀ ಹೇಮಂತ್ ಇವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ವಿವೇಕಾನಂದರ ಚಿಂತನೆ ಹಾಗೂ ಆದರ್ಶದ ಬಗ್ಗೆ ಮಾಹಿತಿ ನೀಡಿದರು.

* ಜಿಲ್ಲಾ ಮಟ್ಟದ ಗೀತಗಾಯನ ಕಾರ್ಯಕ್ರಮವು ಜನವರಿ 20, 2023 ರಂದು ಬೆಂಗಳೂರು ಉತ್ತರ ಜಿಲ್ಲಾ ಕಛೇರಿ ಇಲ್ಲಿ ಆಯೋಜಿಸಲಾಯಿತು. ಎಲ್ಲಾ ಸ್ಥಳೀಯ ಸಂಸ್ಥೆಗಳ 150 ಸ್ಕೌಟ್ಸ್-ಗೈಡ್ಸ್, ಕಬ್-ಬುಲ್‌ಬುಲ್, ರೇಂಜರ್ ಭಾಗವಹಿಸಿದರು. ಜಿಲ್ಲಾ ಮುಖ್ಯ ಆಯುಕ್ತರು ವಿಜೇತರಿಗೆ ಬಹುಮಾನ ಹಂಚಿದರು. ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ಧನ್ಯವಾದ ಸಲ್ಲಿಸಿದರು.



* ಯಲಹಂಕ ಏರ್‌ಫೋರ್ಸ್ ಸ್ಕೂಲ್ ಸ್ಕೌಟ್ಸ್-ಗೈಡ್ಸ್ ಘಟಕ ವತಿಯಿಂದ ಸೈಕಲ್ ಮೂಲಕ ಹೊರ ಸಂಚಾರ ಕಾರ್ಯಕ್ರಮವನ್ನು ಜನವರಿ 21, 2023ರಂದು ಆಯೋಜಿಸಲಾಯಿತು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಶಾಲಿನಿ ನಾರಾಯಣ್ ಇವರು ಚಾಲನೆ ನೀಡಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಗೈಡ್ಸ್ ಶಿಕ್ಷಕಿರಾದ ಶ್ರೀಮತಿ ಪೂರ್ಣಿಮ ಶ್ರೀಮತಿ ಬಾನಲತಾ ಸ್ಕೌಟ್ ಶಿಕ್ಷಕರು ಅಮಿತ್ ಗುಡಿ ಶ್ರೀ ಮಹಮೊದ್ ಜಸಿಲ್, ಕಾರ್ಯಕ್ರಮ ಸಂಘಟಿಸಲು ಸಹಕರಿಸಿದರು.

## ಬೀದರ್

ಸ್ವಾಮಿ ವಿವೇಕಾನಂದರ ಜನ್ಮ ದಿನ ಅಂಗವಾಗಿ ಯುವ ದಿನಾಚರಣೆಯನ್ನು ಜನವರಿ 12, 2023ರಂದು ಬೀದರ್ ತಾಲ್ಲೂಕಿನ ಅಣದೂರ ನೈಟಿಂಗೆಲ್ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಲಾಯಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕುಮಾರ ಚೇತನ್ ಸೊರಳ್ಳಿ, ಚಾರಿಟೇಬ್ ಟ್ರಸ್ಟ್ ಅಧ್ಯಕ್ಷರು, "ಸ್ವಾಮಿ ವಿವೇಕಾನಂದರು ಎಲ್ಲರಿಗೂ ಸ್ಫೂರ್ತಿ, ದಾರಿದೀಪ ಇವರ. ಬದುಕಿನ ಸಂದೇಶಗಳು ಇಂದಿಗೂ ಪ್ರಸ್ತುತ, ಜಗತ್ತಿಗೆ ಜ್ಞಾನದ ಬೆಳಕನ್ನು ಹರಿಸಿದ ಗುರುಗಳು" ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘಟಕಿ ಶ್ರೀಮತಿ ನಾಗರತ್ನ ಪಾಟೀಲ್ ಮುಖ್ಯ ಗುರುಗಳು ಶ್ರೀಮತಿ ಅಂಬಿಕಾ ಜವಳೆ, ಸ್ಕೌಟ್ಸ್-ಗೈಡ್ಸ್ ಮಕ್ಕಳು ಶಾಲೆಯ ಶಿಕ್ಷಕರು ಭಾಗವಹಿಸಿದ್ದರು. ಶ್ರೀಮತಿ ಸಂತೋಷ ಶಿಕ್ಷಕಿ ವಂದಿಸಿದರು.



## ಚಾಮರಾಜನಗರ

ಜನವರಿ 12, 2023 ರಂದು ಸ್ವಾಮಿ ವಿವೇಕಾನಂದರ 160ನೇ ಜನ್ಮ ದಿನಾಚರಣೆ ಹಾಗೂ ರಾಷ್ಟ್ರೀಯ ಯುವ ದಿನಾಚರಣೆಯ ಅಂಗವಾಗಿ ಸೇವಾ ಭಾರತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಕ್ತದಾನ ಶಿಬಿರ ಏರ್ಪಡಿಸಲಾಯಿತು. ಈ ಶಿಬಿರದಲ್ಲಿ ಹಲವಾರು ರೋವರ್ಸ್ ವಿದ್ಯಾರ್ಥಿಗಳು ರಕ್ತದಾನವನ್ನು ಮಾಡಿದರು. ಶಿಬಿರದಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಶಿಬಿರದಲ್ಲಿ ಸೇವೆ ಸಲ್ಲಿಸಿದ್ದರು. ರಕ್ತದಾನದ ಕುರಿತು ಶ್ರೀ ಮಹದೇವ ಪ್ರಸಾದ್‌ರವರು ತಿಳಿಸಿಕೊಟ್ಟರು. ಹಾಗೂ ಕಾಲೇಜಿನ ಪ್ರಾಂಶುಪಾಲರಾದಂತಹ ಶ್ರೀಮತಿ ಡಾ. ನಿರ್ಮಲ ಎಚ್.ಎಂ.ರವರು ರಾಷ್ಟ್ರೀಯ ಯುವ ದಿನದ ಕುರಿತು ಮಾತನಾಡಿದರು.



* ಜನವರಿ 12, 2023 ರಂದು ಸ್ವಾಮಿ ವಿವೇಕಾನಂದರ 160ನೇ ಜನ್ಮ ದಿನಾಚರಣೆ ಹಾಗೂ ರಾಷ್ಟ್ರೀಯ ಯುವ ದಿನಾಚರಣೆಯನ್ನು ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕುದೇರು ಇಲ್ಲಿ ಆಚರಿಸಲಾಯಿತು. ಈ

ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದರ ಕುರಿತು ಹಾಗೂ ಸ್ಕೌಟ್ಸ್–ಗೈಡ್ಸ್‌ನ ಉದ್ದೇಶವನ್ನು ಶ್ರೀಯುತ ವಿ.ಎಂ. ರಾಮಚಂದ್ರ, ಜಿಲ್ಲಾ ಕಾರ್ಯದರ್ಶಿಗಳು ಚಾಮರಾಜನಗರ, ಇವರು ಮಾತನಾಡಿದರು, ರೋವರ್ಸ್ ಮತ್ತು ರೇಂಜರ್ಸ್‌ನ ಸೇವೆಯ ಕುರಿತು ಶ್ರೀಯುತ ಅಶೋಕ್ ಕುಮಾರ್ ಕೆ.ಪಿ., ಜಿಲ್ಲಾ ಸಂಘಟಕರು ಇವರು ತಿಳಿಸಿಕೊಟ್ಟರು. ಆರೋಗ್ಯ ಇಲಾಖೆಯ ಶ್ರೀ ಮಂಜಪ್ಪರವರು ಆರೋಗ್ಯದ ಸಂಬಂಧಪಟ್ಟ ವಿಷಯಗಳನ್ನು ತಿಳಿಸಿದರು. ಕಾರ್ಯಕ್ರಮ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಶಾಂತಮೂರ್ತಿ ಇವರು ಕಾರ್ಯಕ್ರಮದ ಕುರಿತು ಮಾತನಾಡಿದರು.

* ಜನವರಿ 17, 2023 ರಂದು ಸೆಂಟ್ ತೆರೆಸ ಶಾಲೆಯಲ್ಲಿ ನೂತನ ಸ್ಕೌಟ್–ಗೈಡ್ ದಳವನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ವಿ.ಎಂ. ರಾಮಚಂದ್ರರವರು ಮಕ್ಕಳು ಉತ್ತಮ ನಾಗರಿಕರನಾಗಲು ಹಾಗೂ ಮಾನಸಿಕವಾಗಿ ಮತ್ತು ಬೌದ್ಧಿಕವಾಗಿ ಉತ್ತಮ ಪ್ರಜೆಗಳಾಗಿ ಹೊರಹೊಮ್ಮಲು ಸ್ಕೌಟ್ ಸಂಸ್ಥೆಯು ಶಿಕ್ಷಣ ನೀಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಘಟರಾದ ಶ್ರೀ ಅಕೋಶ್ ಕುಮಾರ್ ಕೆ.ಪಿ.ರವರು ಶಾಲೆಯಲ್ಲಿ ಉತ್ತಮ ಪರಿಸರ ವಾತಾವರಣ ಸೃಷ್ಟಿಯಾಗಬೇಕಾದರೆ ಜ್ಞಾನ ಶಿಕ್ಷಣದ ಜೊತೆಗೆ ಸ್ಕೌಟ್–




ಗೈಡ್ ಸಂಸ್ಥೆಯ ಜೀವನ ಕೌಶಲ್ಯದ ಶಿಕ್ಷಣ ತುಂಬಾ ಅವಶ್ಯಕ ಮತ್ತು ಸಂಸ್ಥೆಯಲ್ಲಿ ನಡೆಸುವಂತಹ ತರಬೇತಿ ಮತ್ತು ಕಾರ್ಯಕ್ರಮಗಳ ಬಗ್ಗೆ ವಿವರಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ವ್ಯವಸ್ಥಾಪಕರು ಮತ್ತು ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ಉಪಸ್ಥಿತರಿದ್ದರು.

* ಜನವರಿ 24, 2023 ರಂದು ರಾಜ್ಯ ಸಂಸ್ಥೆಯ ನೂತನ ಕ್ಯಾಲೆಂಡರ್ ಅನ್ನು ಚಾಮರಾಜನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿವಾರ್ಹಕ ಅಧಿಕಾರಿಗಳಾದ ಶ್ರೀಮತಿ ಗಾಯತ್ರಿ ಕೆ.ಎಂ.ರವರಿಂದ ಬಿಡುಗಡೆ ಮಾಡಲಾಯಿತು. ನಂತರ ಶ್ರೀ ಮಂಜುನಾಥ ಎಸ್.ಎನ್. ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಶ್ರೀಮತಿ ಗೀತಾ ಲಕ್ಷ್ಮಿ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರುಗಳಿಗೆ ನೂತನ ಕ್ಯಾಲೆಂಡರ್ ನೀಡಿ ಸ್ಕೌಟ್ಸ್–ಗೈಡ್ಸ್ ಕಾರ್ಯಕ್ರಮಗಳ ಬಗ್ಗೆ ತಿಳಿಸಿ ಸಂಸ್ಥೆಗೆ ಸಹಕಾರ ನೀಡಬೇಕೆಂದು ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀ ವಿ.ಎಂ. ರಾಮಚಂದ್ರ, ಜಿಲ್ಲಾ ಕಾರ್ಯದರ್ಶಿಗಳು ಮತ್ತು ಶ್ರೀ ಅಶೋಕ್ ಕುಮಾರ್ ಕೆ.ಪಿ., ಜಿಲ್ಲಾ ಸಂಘಟಕರು ಉಪಸ್ಥಿತರಿದ್ದರು.

## ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ಜಿಲ್ಲಾ ಸಂಸ್ಥೆಯ ವತಿಯಿಂದ ನವೆಂಬರ್ 21 ರಿಂದ 27, 2022ರ ವರೆಗೆ ಶಿಡ್ಲಘಟ್ಟದ ಉಲ್ಲೂರುಪೇಟೆ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಶಿಕ್ಷಕರಿಗಾಗಿ ಏಳು ದಿನಗಳ ಮೂಲ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ 30 ಜನ ಶಿಕ್ಷಕರು, 20 ಜನ ಶಿಕ್ಷಕಿಯರು ಒಟ್ಟು 50 ಶಿಕ್ಷಕರು ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದರು. ತರಬೇತಿ ಶಿಬಿರದಲ್ಲಿ ಸ್ಕೌಟ್ ವಿಭಾಗದ ನಾಯಕರಾಗಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸಿ.ಬಿ. ಪ್ರಕಾಶ್‌ರವರು ಶಿಬಿರವನ್ನು ನಡೆಸಿಕೊಟ್ಟರು. ಗೈಡ್ ವಿಭಾಗದಲ್ಲಿ ಕೋಲಾರದ ಶ್ರೀಮತಿ ಉಮಾದೇವಿರವರು ನಾಯಕಿಯಾಗಿ ಕಾರ್ಯನಿರ್ವಹಿಸಿದರು. ತರಬೇತಿ ಶಿಬಿರದ ಅವಧಿಯಲ್ಲಿ ಕರ್ನಾಟಕ ರಾಜ್ಯ ಸಂಸ್ಥೆಯ ಸಹಾಯಕ ರಾಜ್ಯ ಆಯುಕ್ತರು ಹಾಗೂ ಹಿರಿಯ ತರಬೇತಿದಾರರಾದ ಶ್ರೀ ಎನ್. ಶ್ರೀನಿವಾಸನ್ ಹಾಗೂ ಗೈಡ್ ವಿಭಾಗದ ರಾಜ್ಯ ತರಬೇತಿ ಆಯುಕ್ತರಾದ ಶ್ರೀಮತಿ ಶ್ಯಾಮಲಾರವರು ಭಾಗವಹಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡಿದರು.



## ಚಿತ್ರದುರ್ಗ

"ಸ್ವಾಮಿ ವಿವೇಕಾನಂದರ ತತ್ವಾದರ್ಶಗಳನ್ನು ಪ್ರತಿಯೊಬ್ಬ ಸ್ಕೌಟ್–ಗೈಡ್ಸ್ ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು" ಎಂದು ವಾಸವಿ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣಶೆಟ್ರು ಹೇಳಿದರು. ನಗರದ ವಾಸವಿ ವಿದ್ಯಾ ಸಂಸ್ಥೆಯಲ್ಲಿ ಭಾರತ್ ಸ್ಕೌಟ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಸ್ವಾಮಿ ವಿವೇಕಾನಂದ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶ್ರೀ ಪಾಟೀಲ್ ಜಿ.ಬಿ.ಸಿ. ಮಾತನಾಡಿ, "ಸ್ವಾಮಿ ವಿವೇಕಾನಂದರ ದಿವ್ಯವಾಣಿಯಂತೆ ಏಳಿ ಏದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ ಇದು ಇಂದಿನ ಯುವ ಪೀಳಿಗೆಗೆ ಸ್ಫೂರ್ತಿ ನೀಡುವ



ಸಂದೇಶವಾಗಿದೆ. ವಿದ್ಯಾರ್ಥಿಗಳ ಜೀವನದಲ್ಲಿ ದೊಡ್ಡ ಗುರಿ ಇಟ್ಟುಕೊಂಡು ಮುನ್ನಡೆದರೆ ಮಾತ್ರ ಯಶಸ್ವಿಯಾಗಲು ಸಾಧ್ಯ" ಎಂದು ಹೇಳಿದರು. ಇದೇ ಸಂದರ್ಭದಲ್ಲಿ ರೆಡ್‌ಕ್ರಾಸ್ ಚೇರ್‌ಮಾನ್ ಶ್ರೀ ಮಹೇಂದ್ರನಾಥ್ ಮಾಸ್ಕ್‌ಗಳನ್ನು ಹಂಚಿದರು. ವಾಸವಿ ವಿದ್ಯಾ ಸಂಸ್ಥೆ ಕಾರ್ಯದರ್ಶಿ ಶ್ರೀ ಅಜೇಯ್ ಹಾಗೂ ಆಡಳಿತ ಮಂಡಳಿ ಅವರು ಸ್ಕೌಟ್ ಮಾಸ್ಟರ್ ಶ್ರೀ ಸುರೇಶ್ ಸೇರಿದಂತೆ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಧಾರವಾಡ

ಜನವರಿ 6, 2023 ರಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಧಾರವಾಡ ವತಿಯಿಂದ ಜ್ಞಾನ ವಿಕಾಸ ತರಬೇತಿ ಸಂಸ್ಥೆ ರಾಯಾಪೂರ ಇಲ್ಲಿ ಕರ್ನಾಟಕ ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಸದರಿ ಪ್ರದರ್ಶನದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಮಕ್ಕಳು ತಮ್ಮ ವಿಜ್ಞಾನ ವಸ್ತುಗಳನ್ನು ಪ್ರದರ್ಶನ ಮಾಡಿದರು. ಸರದಿ ಸಾಲಿನಲ್ಲಿ ಹೋಗುವಂತೆ ತಿಳಿಸಲು ಮತ್ತು ಅಲ್ಲಿ ಶಿಸ್ತಿನ ವ್ಯವಸ್ಥೆ ಮಾಡಲು ಜಿಲ್ಲಾ ಸಂಸ್ಥೆಯಿಂದ ಹತ್ತು (10) ಜನ ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳು ಭಾಗವಹಿಸಿ ಸಹಕರಿಸಿದರು. ಸದರಿ ಕಾರ್ಯಕ್ರಮಕ್ಕೆ ಸಹನಿರ್ದೇಶಕರು ಆಯುಕ್ತರ ಕಾರ್ಯಾಲಯ ಧಾರವಾಡ ಮತ್ತು ಬೆಳಗಾವಿ ವಿಭಾಗದ ಆಯುಕ್ತರಾದ ಶ್ರೀ ಗಜಾನನ ಮನ್ನಿಕೇರಿ ಇವರು ಭಾಗವಹಿಸಿ ಸ್ಕೌಟರ್ಸ್-ಗೈಡರ್ಸ್‌ಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕರು ಆದ ಶ್ರೀ ಬಿ.ಜಿ. ತೊಗರಿ ಸಹ ಇವರಿಗೆ ಮಾರ್ಗದರ್ಶನ ನೀಡಿದರು.



* ಜನವರಿ 12 ರಿಂದ 16, 2023ರ ವರೆಗೆ ಧಾರವಾಡದಲ್ಲಿ ರಾಷ್ಟ್ರಮಟ್ಟದ ಯುವಜನೋತ್ಸವ ಜರುಗಿತು. ಸದರಿ ಕಾರ್ಯಕ್ರಮದಲ್ಲಿ ಬೇರೆ ಬೇರೆ ರಾಜ್ಯಗಳಿಂದ ಆಗಮಿಸಿದ ಯುವ ಕಲಾವಿದರನ್ನು, ಯುವ ಪುರಸ್ಕೃತರನ್ನು, ಆಟಗಾರರನ್ನು ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಮುಂತಾದ ಕಡೆಗಳಿಂದ ಆಗಮಿಸಿದವರನ್ನು ಸ್ವಾಗತಿಸಿ. ಅವರಿಗೆ ವಾಹನ ವ್ಯವಸ್ಥೆ ಹಾಸ್ಟೇಲ್ ವ್ಯವಸ್ಥೆ ಊಟದ ವ್ಯವಸ್ಥೆಗಳನ್ನು ಮಾಡಲು ನಮ್ಮ ಸ್ಕೌಟರ್ಸ್-ಗೈಡರ್ಸ್‌ಗಳು ಸೇವೆಯನ್ನು ಸಲ್ಲಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಧಾರವಾಡ ಮತ್ತು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಧಾರವಾಡ ಇವರು ನಮ್ಮ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

## ಹಾಸನ

ಜನವರಿ 12, 2023 ರಂದು ಜಿಲ್ಲಾ ಸಂಸ್ಥೆ, ಹಾಸನ ವತಿಯಿಂದ ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ ಪ್ರಯುಕ್ತ ಸೈಕಲ್ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಉದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಮಾತನಾಡಿ "ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ, ಚಿಂತನೆಗಳು, ಸಾಮಾಜಿಕ ಸುಧಾರಣೆಗೆ ಕೊಡುಗೆ ಹಾಗೂ ರಾಮಕೃಷ್ಣ ಮಿಷನ್ ಸ್ಥಾಪನೆ ಹಾಗೂ ಅವರ ಸಾಧನೆಗಳನ್ನು ಪರಿಚಯಿಸಿದರು. ನಂತರ ಜಿಲ್ಲಾ ಮುಖ್ಯ ಆಯುಕ್ತರು ಸೈಕಲ್ ಜಾಥಾಕ್ಕೆ ಚಾಲನೆ ನೀಡಿ, ನಗರದ ಪ್ರಮುಖ ಬೀದಿಗಳಲ್ಲಿ ಸ್ವಾಮಿ ವಿವೇಕನಂದರ ಘೋಷವಾಕ್ಯಗಳೊಂದಿಗೆ ಸೈಕಲ್ ಜಾಥಾ ನಡೆಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ವೀರಭದ್ರಪ್ಪರವರು ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ "ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬ ಸ್ವಾಮಿ ವಿವೇಕಾನಂದರ ನುಡಿಯಂತೆ ಎಲ್ಲರು ಉತ್ತಮ ರೀತಿಯ ಗುರಿಗಳನ್ನು ಇಟ್ಟುಕೊಂಡು ಅದನ್ನು ಗುರಿ ತಲುಪುವವರೆಗೆ ಶ್ರಮಿಸಬೇಕು ಅದನ್ನು ಸಾಧನೆ ಮಾಡಿ ತೋರಿಸಬೇಕು" ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಗಿರಿಜಾಂಬಿಕಾ ಹಾಗೂ ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಕಾಂಚನಮಾಲಾರವರು ಮಕ್ಕಳಿಗೆ ಶುಭಹಾರೈಸಿದರು. ಸಹಾಯಕ ರಾಜ್ಯ ಸಂಘಟನಾ ಆಯುಕ್ತೆ ಪ್ರಿಯಾಂಕ ಹೆಚ್.ಎಂ.ರವರು ಕಾರ್ಯಕ್ರಮವನ್ನು ನಿರೂಪಿಸಿದರು ಹಾಗೂ ಸಂಘಟಿಸಿದರು. ಈ ಸಂದರ್ಭದಲ್ಲಿ ಎ.ಡಿ.ಸಿ.




ರಮೇಶ್ ಆರ್.ಎಸ್., ಬಸವರಾಜೇಂದ್ರ ಶಾಲೆಯ ಸ್ಕೌಟ್ ಮಾಸ್ಟರ್ ಸದಾಶಿವ, ಬಿ.ಜಿ.ಎಸ್. ಶಾಲೆಯ ಶಿಕ್ಷಕಿ ಅಶಿಯಾ, ಪೂರ್ಣಿಮಾ ಕೆ.ಎಸ್. ಭೂಮಿಕಾ ಹಾಗೂ 50ಕ್ಕೂ ಸ್ಕೌಟ್ಸ್ ರೋವರ್ಸ್ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

* ಹಾಸನ ಜಿಲ್ಲಾ ಸಂಸ್ಥೆಯಲ್ಲಿ ಸಕ್ರಿಯವಾಗಿ ಸ್ಕೌಟ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ. ಜೆಎಸ್‌ಎಸ್ ಶಾಲೆ ಸಕಲೇಶಪುರ ತಾಲೂಕು ಸಂಸ್ಥೆಯ ಸ್ಕೌಟ್ ಮಾಸ್ಟರಾದ ಶ್ರೀ ನವೀನ್ ರವರಿಗೆ 74ನೇ ಗಣರಾಜ್ಯೋತ್ಸವದ ಅಂಗವಾಗಿ ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿ ಗೌರವವನ್ನು ಸಮರ್ಪಿಸಿರುತ್ತಾರೆ. ಇವರಿಗೆ ಜಿಲ್ಲಾ ಸಂಸ್ಥೆ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು



## ಹಾವೇರಿ

ಜನವರಿ 6 ರಿಂದ 8, 2023 ರವರೆಗೆ ಹಾವೇರಿಯಲ್ಲಿ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮದಲ್ಲಿ ಶ್ರೀ ಎ.ಎಲ್. ಸೂರಣಗಿ ಎಲ್.ಟಿ(ಸ್ಕೌ), ಶ್ರೀ ಎ.ಬಿ. ಕಾಳಪ್ಪನವರ ಸಹ ಕಾರ್ಯದರ್ಶಿರವರು ಕಾರ್ಯನಿರ್ವಹಿಸಿದರು. ಮಹಾತ್ಮ ಗಾಂಧೀಜಿ ಪ್ರೌಢ ಶಾಲೆ ಬವಗೇರಿಯ ಸ್ಕೌಟ್ ತಂಡ, ಕೆ.ಎಲ್.ಇ. ಪ್ರೌಢ ಶಾಲೆಯ ಗೈಡ್ ತಂಡ ಪಥಚಲನೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಜರಿದ್ದರು. ಸಮ್ಮೇಳನದ ಮೇರವಣಿಗೆಯಲ್ಲಿ 7 ತಾಲ್ಲೂಕಿನ ಕಾರ್ಯದರ್ಶಿಗಳು, 50 ಸ್ಕೌಟ್ಸ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್ನರು ಮತ್ತು 50 ರೋವರ್ಸ್ ಮತ್ತು ರೇಂಜರ್ಸ್‌ರವರು ಭಾಗವಹಿಸಿದ್ದರು.



## ಉಡುಪಿ

ಉಡುಪಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜನೆ ಮಾಡಿದ 74ನೇ ಗಣರಾಜ್ಯೋತ್ಸವದ ಪಥಸಂಚಲನ ಕಾರ್ಯಕ್ರಮದಲ್ಲಿ ಸೈಂಟ್ ಸಿಸಿಲಿ ಆಂಗ್ಲ ಮಾಧ್ಯಮ ಶಾಲೆಯ ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ.




## ರಾಯಚೂರು

ಜನವರಿ 20, 2023 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇಲ್ಲಿ ಆಯೋಜನೆ ಮಾಡಲಾಯಿತು. ಸನ್ಮಾನ್ಯ ಶ್ರೀ ರಾಜ ಅಮರೇಶ್ವರ ನಾಯಕ, ಸಂಸದರು, ರಾಯಚೂರು ಅವರು 2023ನೇ ವರ್ಷದ ಸ್ಕೌಟ್ಸ್–ಗೈಡ್ಸ್ ಕ್ಯಾಲೆಂಡರ್‌ಗಳನ್ನು ಬಿಡುಗಡೆಗೊಳಿಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ಅಜೀಜಾ ಸುಲ್ತಾನಾ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀ ಬಸವರಾಜ ಗದಗಿನ ಜಿಲ್ಲಾ ಕಾರ್ಯದರ್ಶಿಗಳು, ಡಾ. ಸಗರದ್ ರಾಯಚೂರು, ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಎನ್. ಶೇಖರ್ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಅಂಬಣ್ಣ ನಾಯಕ ಕವ್ಯಾಕಲ್ ಎಸ್.ಜಿ.ವಿ/ಎಸ್.ಎಮ್.ಸಿ. ಹಾಗೂ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ರವರು ಉಪಸ್ಥಿತರಿದ್ದರು.



* ಜನವರಿ 23, 2023 ರಂದು ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ 2021–22ನೇ ಸಾಲಿನ ಚತುರ್ಥ ಚರಣ್ ಮತ್ತು ಹೀರಕ್ ಪಂಕ್ ಪರೀಕ್ಷಾ ಶಿಬಿರವನ್ನು ಜಿಲ್ಲಾ ಸ್ಕೌಟ್ ಭವನ, ರಾಯಚೂರು ಇಲ್ಲಿ ಶ್ರೀಮತಿ ಅಜೀಜಾ ಸುಲ್ತಾನ ಎಲ್.ಟಿ.(ಗೈ), ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರುರವರ ನೇತೃತ್ವದಲ್ಲಿ ಆಯೋಜನೆ ಮಾಡಲಾಯಿತು. ಅತಿಥಿಗಳಾಗಿ ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಬಸವರಾಜ ಗದಗಿನ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ದಾನಮ್ಮ, ಜಿಲ್ಲಾ, ಖಜಾಂಚಿಗಳು, ಶ್ರೀ ಕಮಲಾಕರ್ ಐನಾಪೂರೆ, ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್ಸ್, ಶ್ರೀಮತಿ ಶಕುಂತಲಾ, ಜಿಲ್ಲಾ ತರಬೇತಿ ಆಯುಕ್ತರು ಗೈಡ್‌ರವರು ಆಗಮಿಸಿದ್ದರು. ಈ ಶಿಬಿರದ ಕಬ್ ವಿಭಾಗದ ನಾಯಕರಾಗಿ ಶ್ರೀ ಚಂದ್ರಶೇಖರ್ ಎ.ಎಲ್.ಟಿ.(ಕ) ಬುಲ್‌ಬುಲ್ ವಿಭಾಗದ ನಾಯಕಿಯವಾಗಿ ಶ್ರೀಮತಿ ವಿದ್ಯಾ ಎ.ಎಲ್.ಟಿ(ಫ್ಲಾ) ಸೇವೆಯನ್ನು ಸಲ್ಲಿಸಿದರು. ಈ ಶಿಬಿರದಲ್ಲಿ ಕಬ್ಸ್–39, ಬುಲ್‌ಬುಲ್–60, ಹಾಜರಿದ್ದರು. ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ.–ಎಸ್.ಎಂ.ಸಿ.ರವರು ಸಂಘಟನೆಯನ್ನು ಮಾಡಿದರು.

## ರಾಮನಗರ

ರಾಮನಗರ ಸ್ಥಳೀಯ ಸಂಸ್ಥೆಯ ವತಿಯಿಂದ 160ನೇ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಹಾಗೂ ರಾಷ್ಟ್ರೀಯ ಯುವ ದಿನಾಚರಣೆಯನ್ನು ಜನವರಿ 12, 2023 ರಂದು ಜಿ.ಕೆ.ಎಂ.ಪಿ.ಎಸ್. ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಶ್ರೀ ಮುನಿಯಪ್ಪ ಸಿ.ಆರ್.ಪಿ., ರಾಮನಗರ ಸಂಚಾರ ಪೊಲೀಸ್ ಠಾಣೆ ಎ.ಎಸ್.ಐ., ಕೆ. ಸ್ವಾಮಿ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಕೃಷ್ಣಪ್ಪ ಎಸ್., ಬಾಲಕಿಯರ ಪ್ರೌಢಶಾಲೆ ಶಾಲೆಯ ಗೈಡ್ಸ್ ಜಿ.ಕೆ.ಎಂ.ಪಿ. ರಾಮನಗರ ಟೌನ್ ಶಾಲೆಯು ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಲ್ಲಾ ಅತಿಥಿಗಳನ್ನು ಶ್ರೀ ಕೃಷ್ಣಪ್ಪ ಎಸ್. ರವರು ಸ್ವಾಗತಿಸಿದರು. ನಂತರ ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಾಯಿತು. ನಂತರ ವಿದ್ಯಾರ್ಥಿಗಳು ವಿವೇಕಾನಂದ ಜೀವನ ಕುರಿತು ಭಾಷಣ ಮಾಡಿದರು.



## ಶಿವಮೊಗ್ಗ

ಜನವರಿ 12, 2023 ರಂದು ಜಿಲ್ಲಾ ಸ್ಕೌಟ್ ಭವನ, ಶಿವಮೊಗ್ಗ ಜಿಲ್ಲಾ ಸಂಸ್ಥೆಯವರು ಏರ್ಪಡಿಸಿದ ಸ್ವಾಮಿ ವಿವೇಕಾನಂದರ 160ನೇ ಜನ್ಮ ದಿನಾಚರಣೆ ಮತ್ತು ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮವನ್ನು ಸಹ್ಯಾದ್ರಿ ವಾಣಿಜ್ಯ ಕಾಲೇಜಿನ ಉಪನ್ಯಾಸಕರು, ಮುಖ್ಯಸ್ಥರು ಕನ್ನಡ ವಿಭಾಗ ಡಾ. ಶುಭಾ ಮರವಂತೆ ಇವರು ದೀಪ ಬೆಳಗಿಸಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪನಮನ ಮಾಡುವುದರ ಮೂಲಕ ಉದ್ಘಾಟಿಸಿ "ಸ್ವಾಮಿ ವಿವೇಕಾನಂದರು ವಿಶ್ವಚೇತನ. ಅವರ ತತ್ವ ಆದರ್ಶಗಳು ನಮಗೆ ಮಾದರಿ ಇಂದಿನ, ಯುವ ಸಮುದಾಯವನ್ನು ಸಶಕ್ತವಾಗಿಸುವುದು ಮತ್ತು ನಮ್ಮ ಸಂಸ್ಕೃತಿ, ಪರಂಪರೆಗಳನ್ನು ಅರಿಯುವಂತೆ ಮಾಡುವುದು ಅವರ ಉದಾತ್ತ ಉದ್ದೇಶವಾಗಿತ್ತು. ಭಾರತದ ಕೀರ್ತಿಯನ್ನು ವಿಶ್ವದೆತ್ತರಕ್ಕೆ ಏರಿಸಿದ ವೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರ ಆದರ್ಶವನ್ನು ನಮ್ಮ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಾಗಲೇ ಇಂತಹ ಕಾರ್ಯಕ್ರಮಗಳನ್ನು



ಸಾರ್ಥಕತೆ ಪಡೆಯುತ್ತವೆ" ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿ "ಇಂದಿನ ಯುವಕರು ಆದರ್ಶಗಳನ್ನು ರೂಡಿಸಿಕೊಳ್ಳುವ ಅವಶ್ಯಕತೆಯಿದೆ. ತಮ್ಮ ಮುಂದಿರುವ ಭ್ರಮೆಯ ಜಗತ್ತಿನಿಂದ ವಾಸ್ತವ ಪ್ರಜ್ಞೆಗೆ ಮರಳಬೇಕಾಗಿದೆ. ನಮ್ಮ ದೇಶದ ನಾಡಿನ ಮಹಾ ಪುರುಷರ ಜೀವನ ಸಿದ್ಧಾಂತಗಳನ್ನು ಅರ್ಥೈಸಿಕೊಂಡು ಬಾಳಬೇಕಾಗಿದೆ. ಈ ನಿಟ್ಟಿನಲ್ಲಿ ಸ್ವಾಮಿ ವಿವೇಕಾನಂದರ ಬದುಕು ಯುವ ಜನತೆ ಮಾರ್ಗದರ್ಶಕವಾಗಲಿ" ಎಂದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರರವರು ಎಲ್ಲರನ್ನು ಸ್ವಾಗತಿಸಿದರು. ವಂದನೆಯನ್ನು ಜಿಲ್ಲಾ ಖಜಾಂಚಿ ಶ್ರೀಮತಿ ಚೂಡಾಮಣಿ ಇ. ಪವಾರ್‌ರವರು ನಿರ್ವಹಿಸಿದರು, ಎ.ಎಸ್.ಓ.ಸಿ. ಶ್ರೀಮತಿ ಭಾರತಿ ಡಾಯಸ್‌ರವರು ಕಾರ್ಯಕ್ರಮ ನಿರೂಪಿಸಿದರು.

## ವಿಜಯಪುರ

ಜನವರಿ 12, 2023 ರಂದು ಶ್ರೀ ಪುಂಡಲಿಂಗೇಶ್ವರ ಮಠಗೋಳಸಾರ ತಾ. ಇಂಡಿ ಇಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಈ ಪ್ರಯುಕ್ತವಾಗಿ ರೋವರ್ಸ್–ರೇಂಜರ್ಸ್ ಮಕ್ಕಳಿಗೆ ಪ್ರಬಂಧ ಸ್ಪರ್ಧೆ ಹಾಗೂ ವಿವೇಕಾನಂದರ ಜೀವನ ಕುರಿತು ಭಾಷಣ ಸ್ಪರ್ಧೆಯನ್ನು ಏರ್ಪಪಡಿಸಿ ವಿಜೇತ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಇಂಡಿ ಸ್ಥಳೀಯ ಸಂಸ್ಥೆಯ ತರಬೇತಿ ಸಲಹೆಗಾರರಾದ ಶ್ರೀ ವೈ.ಜಿ. ಬಿರಾದಾರರವರು ಭಾಗವಹಿಸಿದ್ದರು. ಅತಿಥಿಗಳಾಗಿ ಶ್ರೀ ವಿಜಯಕುಮಾರ ಮಠಪತಿ, ಜಿಲ್ಲಾ ಯುವ ಸಮಿತಿಯ ಉಪಾಧ್ಯಕ್ಷರಾದ ಶ್ರೀಮತಿ ಶೋಭಾ ಕಬಾಡೆ, ಸದಸ್ಯರಾದ ಶ್ರೀಮತಿ ದೀಪಾವಾಘ ಉಪಸ್ಥಿತರಿದ್ದರು. ಶ್ರೀ ವೈ.ಜಿ. ಬಿರಾದಾರರವರು ಮಾತನಾಡಿ "ಭಾರತ ವಿಶ್ವದಲ್ಲಿಯೇ ಅತಿ ಹೆಚ್ಚು ಯುವ ಶಕ್ತಿ ಹೊಂದಿರುವ ರಾಷ್ಟ್ರ. ಪ್ರತಿಯೊಬ್ಬ ಯುವಕರೂ ಸ್ವಾಮಿ ವಿವೇಕಾನಂದರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಳಬೇಕು ಎಂದು ಹೇಳಿದರು. ರೇಂಜರ್ ಶ್ರೀಮತಿ ಶರಣಮ್ಮ ಇಂಗಳಗೇರಿ ಹಾಗೂ ರೋವರ್ ಇಲಿಯಾಸ್‌ರವರು ಸ್ವಾಮಿ ವಿವೇಕಾನಂದರ ಕುರಿತು ಮಾತನಾಡಿದರು. ಕಾರ್ಯಕ್ರಮವನ್ನು ಜಿಲ್ಲಾ ಸಂಘಟಕರಾದ ಶ್ರೀ ರಾಜಶೇಖರ ಖೇಡಗಿ ನಿರೂಪಣೆ ಮಾಡಿದರೆ. ಕು. ಶಿವಾನಿ ಮಠಪತಿ ಎಲ್ಲರನ್ನು ಸ್ವಾಗತಿಸಿದರು. ಶ್ರೀಮತಿ ರುಕ್ಮಿಣಿ ಅಗಸರ ಎಲ್ಲರನ್ನು ವಂದಿಸಿದರು.



* ಎರಡನೇ ಸ್ವಾಮಿ ವಿವೇಕಾನಂದ ಎಂಬ ಹೆಗ್ಗಳಿಕೆಗೆ ಪಾತ್ರರಾದ ಭಾರತ ದೇಶ ಕಂಡ ಶ್ರೇಷ್ಠ ಸಂತ, ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಮಹಾ ಸ್ವಾಮಿಗಳು ಜನವರಿ 02 ರಂದು ಲಿಂಗೈಕ್ಯರಾದರು ಮತ್ತು 03, 2023 ರಂದು ವಿಜಯಪುರ ಜಿಲ್ಲಾಡಳಿತವು ಸಾರ್ವಜನಿಕರ ಅಂತಿಮ ದರ್ಶನಕ್ಕೆ ವಿಜಯಪುರ ಸೈನಿಕ ಶಾಲೆಯ ಆವರಣದಲ್ಲಿ ವ್ಯವಸ್ಥೆಯನ್ನು ಮಾಡಿದ ಸಂದರ್ಭದಲ್ಲಿ ವಿಜಯಪುರ ಜಿಲ್ಲೆಯ 200 ಕ್ಕೂ ಅಧಿಕ ಸ್ಕೌಟರ್ಸ್–ಗೈಡರ್ಸ್ ಮತ್ತು ರೋವರ್ಸ್–ರೇಂಜರ್ಸ್ ಸ್ವಯಂ ಸೇವಕರು ಸಾರ್ವಜನಿಕರಿಗೆ ದರ್ಶನ ಭಾಗ್ಯ ಕಲ್ಪಿಸಿಕೊಡುವುದರಲ್ಲಿ ಪೋಲೀಸ್ ಇಲಾಖೆಯೊಂದಿಗೆ ಉತ್ತಮ ಸೇವೆ ನೀಡಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಸೇವಕರ ಕಾರ್ಯವನ್ನು ಗಮನಿಸಿದ ಮಾನ್ಯ ಜಿಲ್ಲಾಧಿಕಾರಿಗಳಾದ ಡಾ. ವಿಜಯ ಮಹಾಂತೇಶದಾನಮ್ಮನವರ ಜಿಲ್ಲಾಡಳಿತದ ಪರವಾಗಿ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರ್, ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ಶ್ರೀಶೈಲ ಸೋಲಾಪುರ, ಸ್ಕೌಟರ್ ರಾಜ್ಯ ಪ್ರತಿನಿಧಿಗಳಾದ ಶ್ರೀ ಎಸ್.ಎಸ್. ಬೊಮ್ಮನಹಳ್ಳಿ, ಜಿಲ್ಲಾ ಸಂಘಟಕರಾದ ಶ್ರೀ ರಾಜಶೇಖರ ಖೇಡಗಿ ಮುಂತಾದವರು ಉಪಸ್ಥಿತರಿದ್ದರು.




* ಜನವರಿ 07 ರಿಂದ 12ರ ವರೆಗೆ ಶ್ರೀಪುಂಡಲಿಂಗೇಶ್ವರ ದೇವಸ್ಥಾನ ಗೋಳಸಾರ, ತಾ. ಇಂಡಿ ಇಲ್ಲಿ ಆಯೋಜಿಸಲಾದ ಸಾಮೂಹಿಕ ವಿವಾಹ ಹಾಗೂ ದೀಪೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲ ತಾಲ್ಲೂಕಿನ 120 ರೋವರ್ಸ್ ಮತ್ತು ರೇಂಜರ್ಸ್ ಮಕ್ಕಳು ಭಾಗವಹಿಸಿ ಉತ್ತಮ ಸೇವೆ ನೀಡಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾದರು. ಮಕ್ಕಳ ಸೇವೆಯನ್ನು ಮೆಚ್ಚಿದ ಶ್ರೀ ಮಠದ ಪೂಜ್ಯರಾದ ಶ್ರೀ ಸದ್ಗುರು ಅಭಿನವ ಪುಂಡಲಿಂಗ ಮಹಾರಾಜರು ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಶಾಲು ಹೊದಿಸಿ ಹಾರ ಹಾಕಿ ಆಶೀರ್ವದಿಸಿದರು. ಸೇವಾ ಶಿಬಿರದ ನೇತೃತ್ವವನ್ನು ಜಿಲ್ಲಾ ಯುವ ಸಮಿತಿಯ ಉಪಾಧ್ಯಕ್ಷರಾದ ಶ್ರೀಮತಿ ಶೋಭಾ ಕಬಾಡೆ, ಸದಸ್ಯರಾದ ಶ್ರೀಮತಿ ದೀಪಾವಾಘೆ, ಸಂಘಟಕರಾದ ಶ್ರೀ ರಾಜಶೇಖರ ಖೇಡಗಿ ವಹಿಸಿಕೊಂಡಿದ್ದರು.



* ಜಿಲ್ಲೆಯ ಇಂಡಿ ತಾಲ್ಲೂಕಿನ ಗೋಳಸಾರ ಗ್ರಾಮದ ಶ್ರೀ ಪುಂಡಲಿಂಗೇಶ್ವರ ಮಠದಲ್ಲಿ ಜನವರಿ 7 ರಿಂದ 11, 2023ರ ವರೆಗೆ ನಡೆಯುತ್ತಿರುವ ಶ್ರೀ ಸದ್ಗುರು ಚಿನ್ಮಯಮೂರ್ತಿ ತ್ರಿಮೂರ್ತಿ ಮಹಾಶಿವಯೋಗಿಗಳ 29ನೇ ಪುಣ್ಯಾರಾಧನೆ ದೀಪೋತ್ಸವ ಹಾಗ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲ ತಾಲ್ಲೂಕಿನ 120 ರೋವರ್ಸ್ ಮತ್ತು ರೇಂಜರ್ಸ್‌ಗಳು ಸೇವೆ ಸಲ್ಲಿಸಿದರು. ಗೈಡ್ಸ್ ಇಂಡಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಡಾ. ಮಂಜುನಾಥ ಕೋಟೆಣ್ಣವರ ಭೇಟಿ ನೀಡಿ ಸೇವೆಯಲ್ಲಿ ತೊಡಗಿದ ಎಲ್ಲ ಮಕ್ಕಳ ಆರೋಗ್ಯ ವಿಚಾರಿಸಿ ಸೇವಾ ಅನುಭವವನ್ನು ಹಂಚಿಕೊಂಡರು. ದೇಹದಲ್ಲಿ ಸದೃಢವಾದ ಮನಸ್ಸಿರುತ್ತದೆ. ವಿದ್ಯಾರ್ಥಿ ಜೀವನದಲ್ಲಿ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಭಾರತದ ಭವಿಷತ್ತಿನ ಆಸ್ತಿ ಇಂದಿನ ಯುವಕರು ಎಂದು ಹೇಳುತ್ತಾ. ರೋವರ್ಸ್ ಮತ್ತು ರೇಂಜರ್ಸ್‌ಗಳನ್ನು ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಖ್ಯಾತ ವೈದ್ಯರುಗಳಾದ ಡಾ. ಸುರೇಶ್ ಅವರಾದಿ, ಡಾ. ಅನಿಲ್ ಬಲಗೊಂಡ, ಜಿಲ್ಲಾ ಯುವ ಸಮಿತಿಯ ಉಪಾಧ್ಯಕ್ಷರಾದ ಶ್ರೀಮತಿ ಶೋಭಾ ಕಡಾಡೆ, ಸದಸ್ಯರಾದ ಶ್ರೀ ದೀಪಾ ವಾಘೆ, ಜಿಲ್ಲಾ ಸಂಘಟಕರಾದ ಶ್ರೀ ರಾಜಶೇಖರ ಖೇಡಗಿ ಹಾಗೂ ರೋವರ್ಸ್–ರೇಂಡರ್ಸ್ ಮಕ್ಕಳು ಉಪಸ್ಥಿತರಿದ್ದರು.



## ಬಿಬಿಎಂಪಿ



ಜನವರಿ 12, 2023ರಂದು ಬಿಬಿಎಂಪಿ ಜಿಲ್ಲಾ ಸಂಸ್ಥೆಯಿಂದ ಸ್ವಾಮಿ ವಿವೇಕಾಂದರ 160ನೇ ಜಯಂತಿ ಪ್ರಯುಕ್ತ "ಯುವ ದಿನಾಚರಣೆ"ಯನ್ನು ಬೆಂಗಳೂರಿನ ಬಿಬಿಎಂಪಿ ಕಛೇರಿ ಡಾ. ರಾಜ್‌ಕುಮರ್ ಗಾಜಿನ ಮನೆಯಲ್ಲಿ ಆಚರಿಸಲಾಯಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಬಿಬಿಎಂಪಿ ವಿಶೇಷ ಆಯುಕ್ತರಾದ ಶ್ರೀ ರಾಮ್ ಪ್ರಸಾದ್ ಮನೋಹರ್, ಶ್ರೀ ಹನುಮಂತಯ್ಯರವರು, ಶ್ರೀ ಮನಿಸ್ವಾಮಪ್ಪಾ, ಶ್ರೀಮತಿ ಕೆ. ಪ್ರತಿಭಾ, ಶ್ರೀ ಎಂ.ಎ. ಚೆಲ್ಲಯ್ಯ ಇತರರು ಉಪಸ್ಥಿತರಿದ್ದರು. ಬೆಂಗಳೂರಿನ ವಿವಿಧ ಬಿಬಿಎಂಪಿ ಶಾಲೆಗಳಿಮದ ಒಟ್ಟು 500 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್, ಸ್ಕೌಟರ್ಸ್–ಗೈಡರ್ಸ್, ಭಾಗವಹಿಸಿದ್ದರು.

# ಶ್ರದ್ಧಾಂಜಲಿ



ಜನವರಿ 16, 2023 ರಂದು ಶಿವಮೊಗ್ಗ ಜಿಲ್ಲಾ ಸಂಸ್ಥೆಯ ಸಾಗರ ತಾಲ್ಲೂಕಿನ ಸ್ಕೌಟ್ ಮಾಸ್ಟರ್ ಆಗಿಯೂ, ಸಾಗರ ತಾಲ್ಲೂಕಿನ ಕಾರ್ಯದರ್ಶಿಯಾಗಿಯೂ ಜಿಲ್ಲಾ ಸಂಸ್ಥೆ ವತಿಯಿಂದ ರಾಜ್ಯ ಸಂಸ್ಥೆಗೆ ಸ್ಕೌಟರ್ ಪ್ರತಿನಿಧಿಯಾಗಿಯೂ ಕಾರ್ಯನಿರ್ವಹಿಸಿದಂತಹ **ಶ್ರೀ ಎಂ.ಎಸ್. ರಂಗಪ್ಪ** ಹೆಚ್.ಡಬ್ಲ್ಯೂ.ಬಿ.(ಎಸ್)ರವರು ತಮ್ಮ 68ನೇ ವಯಸ್ಸಲ್ಲಿ ವಿಧಿವಶರಾದವರು. ಇವರು ತಮ್ಮ ಅಧಿಕಾರಾವಧಿಯಲ್ಲಿ ಅನೇಕ ಮಕ್ಕಳನ್ನು ಜಿಲ್ಲಾ ಹಾಗೂ ರಾಜ್ಯ ಪುರಸ್ಕಾರಕ್ಕೆ ತಯಾರಿಸಿದಲ್ಲದೆ ತಾಲ್ಲೂಕಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಗೊಳಿಸಿಕೊಟ್ಟಿರುತ್ತಾರೆ. ಇವರು ತಮ್ಮ ಪತ್ನಿ, ಇಬ್ಬರು ಹೆಣ್ಣು ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂದು ಬಳಗದವರನ್ನು ಬಿಟ್ಟು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಲಭಿಸಲೆಂದು ಹಾಗೂ ಅವರ ಕುಟುಂಬಕ್ಕೆ ಈ ದುಃಖವನ್ನು ಸಹಿಸುವ ಶಕ್ತಿ ಸಿಗಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.



**ಶ್ರೀ ಎಸ್.ಆರ್. ಸಜ್ಜನ,** ಸ್ಕೌಟ್ ಮಾಸ್ಟರ್ ಶ್ರೀ ಬಸವೇಶ್ವರ ಅಂತರಾಷ್ಟ್ರೀಯ ಸ್ಕೂಲ್, ಬಸವನಬಾಗೇವಾಡಿ ವಿಜಯಪುರ ಜಿಲ್ಲೆ ಇವರು ಜನವರಿ 20, 2023ರಂದು ನಿಧನರಾದರು.

ಇವರು ಸ್ಕೌಟ್ ವಿಭಾಗದಲ್ಲಿ ಅಡ್ವಾನ್ಸ್ ತರಬೇತಿ ಹೊಂದಿದ್ದು 08 ವರ್ಷಗಳಿಂದ ವಿಜಯಪುರ ಜಿಲ್ಲಾ ಸಂಸ್ಥೆಯಲ್ಲಿ ಸ್ಕೌಟ್ ಮಾಸ್ಟರ್ ಸೇವೆ ಸಲ್ಲಿಸಿದ್ದರು.



**ಶ್ರೀ ನಾಗರಾಜ್,** ಸ್ಕೌಟ್ ಮಾಸ್ಟರ್ ವಿದ್ಯದಾಹಿನಿ ಶಾಲೆ, ಹರಿಹರ ತಾ॥, ದಾವಣಗೆರೆ ಜಿಲ್ಲೆ ಇವರು ಜನವರಿ 28, 2023ರಂದು ನಿಧನರಾದರು. ಇವರು ಸ್ಕೌಟ್ ವಿಭಾಗದಲ್ಲಿ ಪ್ರೀ-ಎಎಲ್‌ಟಿ ತರಬೇತಿಯನ್ನು ಪಡೆದಿದ್ದು ಹಲವಾರು ವರ್ಷಗಳಿಂದ ಸ್ಕೌಟ್ ಮಾಸ್ಟರ್ ಆಗಿ ಉತ್ತಮ ಸೇವೆ ಸಲ್ಲಿಸಿದ್ದರು.

ಇವರು ರಾಜ್ಯ, ಜಿಲ್ಲೆ, ಸ್ಥಳೀಯ ಸಂಸ್ಥೆ ಸ್ಕೌಟ್-ಗೈಡ್ ಶಿಬಿರಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು.



**ಶ್ರೀ ಚಂದ್ರಕಾಂತ್ ಪಾಟೀಲ್,** ಜಿಲ್ಲಾ ಸ್ಥಾನಿಕ ಆಯುಕ್ತರು, ಭಾರತ್ ಸ್ಕೌಟ್ ಮತ್ತು ಗೈಡ್ಸ್ ಬೀದರ್ ಇವರು ಡಿಸೆಂಬರ್ 20, 2022 ರಂದು ಬೀದರ್‌ನಲ್ಲಿ ನಿಧನರಾದರು. ಇವರು 2017 ರಿಂದ 2022ರ ವರೆಗೆ ಬೀದರ್ ಜಿಲ್ಲಾ ಸಂಸ್ಥೆಯಲ್ಲಿ ಸ್ಥಾನಿಕ ಆಯುಕ್ತರಾಗಿ ಸೇವೆ ಸಲ್ಲಿಸಿದ್ದರು.

ಇವರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಎಲ್.ಕೆ.ಜಿ ಯಿಂದ ಎಸ್.ಎಸ್.ಎಲ್.ಸಿ. ವರೆಗೆ ಎಲ್ಲಾ ಮಕ್ಕಳಿಗೆ ಸ್ಕೌಟ್-ಗೈಡ್ ಸಮವಸ್ತ್ರಗಳನ್ನು ನೀಡುವುದರ ಮೂಲಕ ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಕಾರಣರಾಗಿದ್ದರು. ತಮ್ಮ ಶಿಕ್ಷಣ ಸಂಸ್ಥೆಯಿಂದ 20 ಶಿಕ್ಷಕ-ಶಿಕ್ಷಕಿಯರಿಗೆ ಸ್ಕೌಟ್-ಗೈಡ್ ತರಬೇತಿ ಕೊಡಿಸಿದ್ದರು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

# Glimpses of International Scouts-Guides Cultural Jamboree

































Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 28)




If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26

# ಗಣರಾಜ್ಯ


**ನಾಡೋಜ ಡಾ. ಗೊ.ರು. ಚನ್ನಬಸಪ್ಪ**
ಗೌರವಾಧ್ಯಕ್ಷರು, ಪ್ರಕಟಣೆಗಳ ಸಮಿತಿ
ಭಾರತ್ ಸ್ಕೌಟ್ಸ್-ಗೈಡ್ಸ್, ಕರ್ನಾಟಕ


